ಮಾನುಷಿ

ತಿಂಗಳ ಪತ್ರಿಕೆ ಜೂನ್ : 1997

* 6ನೇ ರಾಷ್ಟ್ರೀಯ ಮಹಿಳಾ ಚಳುವಳಿಗಳ ಸಮಾವೇಶ
* ಸ್ಥಳಾಂತರದ ಸಮಸ್ಯೆ ಮತ್ತು ಮಹಿಳೆ
* ಕೈಗಾ ಪ್ರದೇಶದಲ್ಲಿ ಮುಳುಗಡೆ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 6

ಜೂನ್ : 1997

ವಿಳಾಸ :

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಇಂದು ಈ ದೇಶ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಮುಳುಗಡೆ-ಸ್ಥಳಾಂತರದ ಸಮಸ್ಯೆ ತುಂಬಾ ಗಂಭೀರವಾದದ್ದು. ಪಾಶ್ಚಾತ್ಯ ಮಾದರಿಯ ಆಧುನಿಕ ಅಭಿವೃದ್ಧಿ ಕಲ್ಪನೆಗೆ ಪಕ್ಕಾದಂತಹ ಪೌರಾತ್ಯ ವಿಶಿಷ್ಟತೆಯ ದೇಶ ಜಾಗತೀಕರಣಕ್ಕೂ ತೆರೆದುಕೊಂಡಾಗ ಉಂಟಾಗುವ ಕೋಲಾಹಲ ಎಂತದ್ದು ಎಂಬುದಕ್ಕೆ ಈ ಸ್ಥಳಾಂತರದ ಸಮಸ್ಯೆಯೊಂದು ಜ್ವಲಂತ ನಿದರ್ಶನ. ನೆಲಾಕಾಶಗಳ ವಿವರಗಳೊಟ್ಟಿಗೆ ಅವಿನಾ ಸಂಬಂಧದಲ್ಲಿ ಬೆಸೆದ ಬದುಕುಗಳ ಸಾಂಸ್ಕೃತಿಕ-ಧಾರ್ಮಿಕ, ಸಾಮಾಜಿಕ-ಆರ್ಥಿಕ ವ್ಯವಸ್ಥೆಗಳ ನಾಶ ಇದರ ಬಲುಮುಖ್ಯ ಕೊಡುಗೆ. ಇದರ ಜತೆಗೆ ಕುಟುಂಬಗಳು ಛಿದ್ರಗೊಂಡು ಎಡೆಮಾಡುವ ಮಾನಸಿಕ ವಿಹ್ವಲತೆ ವಿವರಕ್ಕೆ ನಿಲುಕದ್ದು. ಇವೆಲ್ಲಕ್ಕೂ ಹಣದ ರೂಪದ ಪರಿಹಾರದಲ್ಲಿಯೇ ಉತ್ತರವಿದೆಯೆಂದು ಭಾವಿಸಿಕೊಂಡಿದೆ ಬಂಡವಾಳಶಾಹೀ ಧೋರಣೆಯ ದುರಹಂಕಾರ.

ಅದೇನೇಯಾದರೂ, ದೇಶದಾದ್ಯಂತ, ಮುಖ್ಯವಾಗಿ ಕಳೆದ ಒಂದು ದಶಕದ ಸಂದರ್ಭದಲ್ಲಿ ಅನೇಕ ಜನಪರ ಚಳವಳಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಕೈಗೆತ್ತಿಕೊಂಡಿವೆ ಅಲ್ಲದೇ ಈ ಸಮಸ್ಯೆ ಎದುರಿಸಲೆಂದೇ ಕೆಲ ಚಳವಳಿಗಳು ಹುಟ್ಟಿಕೊಂಡಿವೆ ಕೂಡ. ಈ ಹೋರಾಟಗಳು "ಇಡೀ ದೇಶದ ಒಳಿತಿಗಾಗಿ ಹಲವರು ತ್ಯಾಗವೆಸಗಬೇಕು" ಎಂಬ ಕಿವಿಮಾತಿನ ಅಭಿವೃದ್ಧಿ ಧೋರಣೆಗೆ ಬಲವಾದ ಸವಾಲೆಸೆದಿವೆ.

ಸ್ಥಳಾಂತರದ ಸಮಸ್ಯೆಗೆ ತೀವ್ರವಾಗಿ ಬಲಿಯಾಗಿರುವ ಅನೇಕ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಲ್ಲಿನ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿನ ಬಹುತೇಕ ಎಲ್ಲ ಜಿಲ್ಲೆಗಳೂ ಸ್ಥಳಾಂತರದ ಸಮಸ್ಯೆಗೆ ಪಕ್ಕಾಗಿವೆ. ತೀವ್ರ ಕೃಷಿಗಾಗಿ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆಗಳಿಗಾಗಿ ಅಣೆಕಟ್ಟುಗಳು; ಅಣುಸ್ಥಾವರಗಳು; ಗಣಿಗಾರಿಕೆ ಮತ್ತು ಕಲ್ಲೊಡೆತ; ಅರಣ್ಯ ಸಂರಕ್ಷಣೆ ಮತ್ತು ಭೂಗೋಲ ಸಂರಕ್ಷಣೆ ಮುಂತಾದವು ಇಲ್ಲಿನ ಜನರ ಸ್ಥಳಾಂತರಕ್ಕೆ ಮೂಲ ಕಾರಣಗಳಾಗಿವೆ. ಒಂದು ಲಕ್ಷ ಅರವತ್ತು ಸಾವಿರ ಜನರ ಸ್ಥಳಾಂತರಕ್ಕೆ ಕಾರಣವಾದ ಆಲಮಟ್ಟಿ ಅಣೆಕಟ್ಟಿನ ಜಲಾಶಯದ ನೀರು (ಕೃಷ್ಣಾ ಮೇಲ್ದಂಡೆ ಯೋಜನೆ) ಈ ಮಳೆಗಾಲದಲ್ಲಿ ಯೋಜನ ತಂತ್ರಜ್ಞರಿಗೆ ಚಳ್ಳೆಹಣ್ಣು ಉಣಿಸಿ ಇನ್ನೂ 67 ಹಳ್ಳಿಗಳಿಗೆ ನುಗ್ಗಿದೆ. ಬಾಗಲುಕೋಟೆ ಊರು ಅರ್ಧಕ್ಕರ್ಧ ಮುಳುಗಿ ನಿಂತಿದೆ. ಅಡ್ಡಗಟ್ಟಲ್ಪಟ್ಟ ಕೃಷ್ಣೆ ಹಿಂದೆಂದೂ ಕಂಡರಿಯದ ರೀತಿಯಲ್ಲಿ ರೋಷಗೊಂಡಿದ್ದಾಳೆ.

ಸ್ಥಳಾಂತರದ ಸಮಸ್ಯೆ ಮಹಿಳೆಯರ ಬದುಕಲ್ಲಿ ಉಂಟು ಮಾಡುವ ವಿಹ್ವಲತೆಗೆ ತನ್ನದೇ ಆಯಾಮಗಳಿವೆ. ಇದನ್ನು ಗುರುತಿಸುವ ಪ್ರಯತ್ನವನ್ನು 'ಮಾನಸ'ದ ಈ ಸಂಚಿಕೆಯಲ್ಲಿ ಪ್ರಾರಂಭಿಸಲಾಗಿದೆ. ಬೀನಾ ಅವರ ಲೇಖನ ಮತ್ತು ವಿಷ್ಣು ಕಾಮತರ (ಉಪನ್ಯಾಸಾಧಾರಿತ) ಲೇಖನಗಳು ಈ ಪ್ರಯತ್ನಕ್ಕೆ ನಾಂದಿ ಕೊಟ್ಟಿವೆ. ಸ್ಥಳಾಂತರದ ಸಮಸ್ಯೆ ಮಹಿಳೆಯರ ಬದುಕನ್ನು ಬಾಧಿಸುವ ಇನ್ನೂ ವಿವಿಧ ಆಯಾಮಗಳನ್ನು ಮುಂದಿನ ಸಂಚಿಕೆಗಳಲ್ಲಿ ಎತ್ತಿಕೊಳ್ಳಬೇಕೆಂದಿದ್ದೇವೆ. ಇನ್ನೊಂದು ಕಡೆಯಲ್ಲಿ ಮಹಿಳೆಯರ ವಯಕ್ತಿಕ ಬದುಕುಗಳಲ್ಲಿ ಮದುವೆಯಿಂದ ಪ್ರಾರಂಭಿಸಿ ಅನೇಕ ಹಂತಗಳಲ್ಲಿ ಉಂಟಾಗುವ ಸ್ಥಳಾಂತರ ವಿಶಿಷ್ಟ-ವಿಚಿತ್ರ ಆಯಾಮದ್ದು ಎಂಬುದನ್ನು ಮರೆಯುವಂತಿಲ್ಲ.

6ನೇ ರಾಷ್ಟ್ರೀಯ ಮಹಿಳಾ ಚಳುವಳಿಗಳ ಸಮಾವೇಶದ ಸಿದ್ಧತಾ ಸಭೆಯ ವರದಿ

6ನೇ ರಾಷ್ಟ್ರೀಯ ಸಮಾವೇಶ ನಡೆಸಲು ಅನೇಕ ಸಿದ್ಧತಾ ಸಭೆಗಳು ಈಗಾಗಲೆ ನಡೆದಿವೆ. ಏಪ್ರಿಲ್ 5 ಮತ್ತು 6ರಂದು ಬಾಂಬೆಯಲ್ಲಿ 5ನೇ ಸಿದ್ಧತಾ ಸಭೆಯು ನಡೆಯಿತು. ಈ ಕೆಳಕಂಡ ಗುಂಪುಗಳು ಭಾರತದ ವಿವಿಧ ಕಡೆಯಿಂದ ಭಾಗವಹಿಸಿದ್ದವು.

ಪ್ರೇರಣಾ ಭಾರತಿ - ಮಧುರ್‌ಪುರ್, ಮಹಿಳಾ ಜಾಗೃತಿ-ಗೋಮಿಯಾ, ನಾರಿ-ಮುಕ್ತಿ ವಾಹಿನಿ-ಪಲಮು, ಸಖಿರಿ-ಸಿವಾನ್, ಸಂಸ್ಕೃತಿ, ಶ್ರಮ್‌ಜೀವಿ ಮಹಿಳಾ ಸಮಿತಿ, ಮಹಿಳಾ ಕಲ್ಯಾಣ್ ಸಮಿತಿ ಹಾಗು ಮಹಿಳಾ ಮುಕ್ತಿವಾಹಿನಿ-ಜೆಮ್‌ಶೆಡ್‌ಪುರ್, ಮಹಿಳಾ ಉತ್ಪಿಡನ್ ವಿರೋಧಿ ಸಂಘರ್ಷ ಸಮಿತಿ-ರಾಂಚಿ, ಸಹೇಲಿ ಮತ್ತು ಜಾಗೋರಿ-ದೆಹಲಿ, ಸ್ವಾಶ್ರಯ ಮತ್ತು ಸಹ್ಯಾರ್-ಬರೋಡ, ಪ್ರೇಂ-ಒರಿಸ್ಸಾ, ಸ್ಪಂದನ-ಆಂದ್ರಪ್ರದೇಶ್, ಸ್ತ್ರೀ ಚೇತನ-ನಾಗ್‌ಪುರ್, ಪ್ರಗತಿಶೀಲ್ ಮಹಿಳಾ ಸಂಘಟನ್-ಬಲ್ಲಾಪುರ್, ವುಮೆನ್ಸ್ ಸೆಂಟರ್, ಪಿ. ಎಂ. ಎಸ್, ಆವಾಜ್-ಎ-ನಿಸ್ವಾನ್ ಮತ್ತು ಎಫ್.ಎ.ಓ.ಡಬ್ಲ್ಯು - ಬಾಂಬೆ.

ಸಭೆಯ ಬಗ್ಗೆ ಆಸಕ್ತಿ ತೋರಿಸಿ ಆದರೆ ಅನಿವಾರ್ಯ ಕಾರಣಗಳಿಂದ ಸಭೆಗೆ ಬರಲಾಗದಿದ್ದ ಕೆಲವು ಗುಂಪುಗಳೆಂದರೆ - ಅನ್ವೇಷಿ-ಹೈದ್ರಾಬಾದ್, ಸಚೇತನ-ಅಹ್ಮದಾಬಾದ್, ಪಿ.ಸಿ.ಓ ಸೆಂಟರ್ ಟ್ರಿವಾಡ್ರಂ, ರೂಪಾಂತರ್ - ರಾಯ್‌ಪುರ್, ಶ್ರಮ್ ಜೀಬಿ ಮಹಿಳಾ ಸಮಿತಿ - 24 - ಪರ್ಗನಾಸ್, ಮೈತ್ರಿ-ಪಶ್ಚಿಮ ಬಂಗಾಳ, ನಾರಿ ಸಂವಾದ್ ಜೆಮ್‌ಶೆಡ್‌ಪುರ್, ಎಸ್.ಇ.ಡಿ. - ಕೊಟ್ಟಾಯಂ, ಕೇರಳ.

ಹಿಂದಿನ ಸಿದ್ಧತಾ ಸಭೆಗಳಿಗೆ ಗುಂಪುಗಳ ಹೆಚ್ಚಿನ ಭಾಗವಹಿಸುವಿಕೆ (ದೇಶದಲ್ಲೆಡೆಯಿಂದ) ಸಾಧ್ಯವಾಗದಿದ್ದ ಕಾರಣ ಬಾಂಬೆಯಲ್ಲಿ ಐದನೆ ಸಿದ್ಧತಾ ಸಭೆಯನ್ನು ಏರ್ಪಡಿಸಲಾಗಿತ್ತು. ದೇಶದೆಲ್ಲೆಡೆಯಿಂದಲೂ ಬಾಂಬೆಗೆ ಬರುವುದು ಸುಲಭವಾದ್ದರಿಂದ ಸಭೆಯನ್ನು ಬಾಂಬೆಯಲ್ಲಿಡಲಾಗಿತ್ತು.

ರಾಷ್ಟ್ರೀಯ ಸಮನ್ವಯ ಸಮಿತಿಯ ರಚನೆ ಹಾಗು ಜವಾಬ್ದಾರಿಗಳು

ಸಭೆಯಲ್ಲಿ ಮೊದಲಿಗೆ ರಾಷ್ಟ್ರೀಯ ಸಮನ್ವಯ ಸಮಿತಿಯ ರಚನೆ ಹಾಗು ಜವಾಬ್ದಾರಿ ಕುರಿತು ನಿರ್ಧರಿಸಲಾಯಿತು. ರಾ.ಸ.ಸ.ಯು ಒಂದು ಖಾಯಂ ಸಂಸ್ಥೆಯಲ್ಲ. ರಾಷ್ಟ್ರೀಯ ಸಮಾವೇಶಗಳ ಪ್ರಾರಂಭದಿಂದಲೂ ಇದು ಒಂದು ಸಡಿಲ ರಚನೆಯೇ ಆಗಿದ್ದು ಅದು ಸಮಾವೇಶದಿಂದ ಸಮಾವೇಶಕ್ಕೆ ಬದಲಾಗುತ್ತಲೇ ಬಂದಿದೆ. ಕಳೆದ ಬಾರಿಯ ಸಮಾವೇಶದ ನಂತರ, ಯಾರು ರಾ.ಸ.ಸ.ಯ ಸದಸ್ಯರಾಗಬೇಕೆಂಬುದಕ್ಕೆ ಮಾನದಂಡವನ್ನು ರೂಪಿಸಲಾಗಿದೆ. ಅವು ಈಗಲೂ ಒಪ್ಪಿತವಾಗುವಂತವು. ತಿರುಪತಿ ಸಮಾವೇಶಕ್ಕೆ ಮೊದಲು ಘೋಷಣಾ ಪತ್ರವನ್ನು (declaration)ವನ್ನು ರೂಪಿಸಲಾಗಿತ್ತು. ಅದನ್ನು ಕಳೆದ ರಾ.ಸ.ಸ. ಸಭೆಗಳಲ್ಲಿ ಪೂರ್ಣಗೊಳಿಸಲಾಗಿದೆ. ಈ ಘೋಷಣಾ ಪತ್ರಕ್ಕೆ ಸಿಕ್ಕ ಒಮ್ಮತವೆ ರಾ.ಸ.ಸ. ಸಭೆಗಳಲ್ಲಿ ಭಾಗವಹಿಸಲು ಆಧಾರವಾಗಿತ್ತು. ಇದಲ್ಲದೆ ಇತರೆ ಮಾನದಂಡಗಳು ಇವೆ. ಅವೆಂದರೆ - ಒಂದು ಸಮಾವೇಶದಲ್ಲಿ ಭಾಗವಹಿಸಿರಬೇಕು, ಮಹಿಳಾ ಗುಂಪಾಗಿರಬೇಕು, ಮಹಿಳಾ ಅಭಿವೃದ್ಧಿ ಕಾರ್ಯಕ್ರಮ ಮಹಿಳಾ ಸಮಾಖ್ಯಾದಂತ ಸರ್ಕಾರಿ ಯೋಜನೆಗಳಾಗಿರಬಾರದು, ಯಾವುದೇ ರಾಜಕೀಯ ಪಕ್ಷಗಳಿಗೆ ಅಫಿಲಿಯೇಟ್ ಆಗಿರಬಾರದು. ಇತ್ಯಾದಿ.,

ಬಾಂಬೆಯ ಸಭೆಯಲ್ಲಿ ಭಾಗವಹಿಸಿದಂತ ಗುಂಪುಗಳು ಕಳೆದ ಸಭೆಗಳಲ್ಲಿ ನಿಯಮಿತವಾಗಿ ಭಾಗವಹಿಸುತ್ತಿದ್ದರಿಂದಾಗಿ, ಇವೆ ಗುಂಪುಗಳೆ ಮುಂದಿನ ಸಮಾವೇಶದ ರಾ.ಸ.ಸ. ಸದಸ್ಯರಾಗಬೇಕೆಂದು ತೀರ್ಮಾನಿಸಲಾಗಿತ್ತು. ಬೇರೆ ಗುಂಪುಗಳಿಗೆ ಭಾಗವಹಿಸಬಹುದು. ಆದರೆ ಮೂಲಭೂತವಾಗಿ ದೇಶದಲ್ಲೆಡೆಯಿಂದ ಭಾಗವಹಿಸುವಿಕೆ ಇರಲಿಲ್ಲ ಎಂದು ತಲೆ ಕೆಡಿಸಿಕೊಳ್ಳದೆ ಈಗ ರಚಿಸಿರುವ ಗುಂಪೇ ಮುಂದೆಯೂ ನಿರ್ಧಾರಗಳನ್ನು ತೆಗೆದುಕೊಂಡು ಸಮಾವೇಶವನ್ನು ಯೋಜಿಸುವುದು. ರಾಂಚಿಯಲ್ಲಿ ನವೆಂಬರ್ 97ರಲ್ಲಿ ನಡೆಯಲಿರುವ ಅಂತಿಮ ಸಿದ್ಧತಾ ಸಭೆಯಲ್ಲಿ ಭಾಗವಹಿಸುವ ಗುಂಪುಗಳೆ ಈ ಸಲದ ಸಮಾವೇಶದ ಅಂತಿಮ ರಾ.ಸ.ಸ.ಯಾಗುವುದು.

ರಾ.ಸ.ಸ.ಯ ರಚನೆಯ ಕುರಿತು ಮೇಲಿನ ತೀರ್ಮಾನವನ್ನು ತೆಗೆದುಕೊಂಡ ಬಳಿಕ, ರಾ.ಸ.ಸ. ತೆಗೆದುಕೊಳ್ಳಬೇಕಾದ ಜವಾಬ್ದಾರಿಗಳ ಕುರಿತು ಚರ್ಚಿಸಲಾಯಿತು. ಗುರುತಿಸಲಾದ ನಾಲ್ಕು ಮುಖ್ಯ ಜವಾಬ್ದಾರಿಗಳೆಂದರೆ -

* ಚರ್ಚೆಯ ವಸ್ತು (themes) ಮತ್ತು ಕಮ್ಮಟಗಳನ್ನು ಯೋಜಿಸುವುದು.
* ಹಣ ಸಂಗ್ರಹಣೆ
* ಸಮಾವೇಶ ನಡೆಯುವಾಗ (ವ್ಯವಸ್ಥೆ ಹಾಗು ಸಂಚಾಲನೆ (logistics) ಕುರಿತು ರಾಜ್ಯ ಸಮನ್ವಯ ಸಮಿತಿಗೆ ಸಹಕರಿಸುವುದು.
* ರಾಜ್ಯ ಸ. ಸ. ಯು ಸುಗಮವಾಗಿ ಕಾರ್ಯ ನಿರ್ವಹಿಸಲು ಸಹಕರಿಸುವುದು.

ಈ ಮುಖ್ಯ ನಿರ್ಧಾರಗಳಲ್ಲದೆ, ಸಿದ್ಧತಾ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಜಾರಿಗೊಳಿಸಲಾಗಿದೆಯೆ ಎಂಬುದರ ಮೇಲ್ವಿಚಾರಣೆ (Monitoring) ಕೆಲಸವನ್ನು ರಾಷ್ಟ್ರೀಯ ಸ.ಸ. ಮಾಡಬೇಕಾಗುತ್ತದೆ.

ರಾಜ್ಯ ಸ. ಸ.ಯವರು, ರಾಷ್ಟ್ರೀಯ ಸ.ಸ.ಯ ಸದಸ್ಯರ ಮುಂದೆ ಕೆಲವು ನಿರ್ದಿಷ್ಟ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಅವುಗಳಲ್ಲಿ ಕೆಲವೆಂದರೆ - ಸಮಾವೇಶವನ್ನು ಸಂಘಟಿಸಲು ಒಂದು ತಿಂಗಳ ಮುಂಚೆಯಾದರು ರಾಂಚಿಗೆ ಬಂದು ಸಹಾಯ ಮಾಡುವುದು. ರಾಜ್ಯ ಸ.ಸ.ಯ ಕೆಲವು ಸಿದ್ಧತಾ ಸಭೆಗಳಲ್ಲಿ ಭಾಗವಹಿಸಿ ಸಂಘಟನೆಯ ವಿವಿಧ ಕಾರ್ಯಗಳನ್ನು ಮಾಡಲು ನೇಮಿಸಿರುವ ವಿವಿಧ ಟೀಂಗಳನ್ನು ಅನುಗೊಳಿಸುವುದು ಮತ್ತು ಸಂಘಟಿಸಲು ಸಹಾಯ ಮಾಡುವುದು. ಕೆಲವು ಗುಂಪುಗಳು ಒಂದು ತಿಂಗಳು ಮುಂಚಿತವಾಗಿ ರಾಂಚಿಗೆ ಬರಲು ಒಪ್ಪಿಕೊಂಡವು. ಮೇ ತಿಂಗಳಿನಲ್ಲಿ ರಾಜ್ಯ ಸ.ಸ. ಸದಸ್ಯರನ್ನು ಅನುಗೊಳಿಸುವ (Orientation) ಕಾರ್ಯಕ್ರಮವನ್ನು ಜುಲೈ ತಿಂಗಳಿನಲ್ಲಿ ನಡೆಸಲಾಗುವುದು. ಭಾಗವಹಿಸುವ ಜವಾಬ್ದಾರಿಯನ್ನು ಫೋರಂ, ಸಹೇಲಿ, ಹಾಗು ಸ್ತ್ರೀ ಚೇತನಾದವರು ವಹಿಸಿಕೊಂಡರು. ರಾಜ್ಯಮಟ್ಟದಲ್ಲಿ ಹಲವು ಟೀಂಗಳನ್ನು ಮಾಡಲಾಗಿದ್ದು ಅದರಲ್ಲಿ ರಾಷ್ಟ್ರೀಯ ಸ.ಸ. ಪಾಲ್ಗೊಳ್ಳಬೇಕೆಂದು ಕೋರಲಾಗಿದೆ. ಅದರಲ್ಲೂ ವಿಶೇಷವಾಗಿ ಲೆಕ್ಕ ನಿರ್ವಹಣೆ, ಮಾಧ್ಯಮ, ಪ್ರೆಸ್ ಹಾಗು ದಾಖಲೆ ಟೀಂಗಳಲ್ಲಿ ಹೆಚ್ಚಿನ ಅವಶ್ಯಕತೆಯಿದೆ ಅಲ್ಲದೆ ನಿರ್ದಿಷ್ಟವಾಗಿ ರಿಜಿಸ್ಟ್ರೇಶನ್ ಫಾರಂಗಳನ್ನು ಪರಿಷ್ಕರಿಸಲು ಸಹಾಯ ಬೇಕೆಂದು ಕೇಳಿದ್ದಾರೆ. ಕೆಲವು ಜವಾಬ್ದಾರಿಗಳನ್ನು ಸಭೆಯಲ್ಲಿ ಹಂಚಿಕೊಳ್ಳಲಾಯ್ತು. ಕೆಲವು ಜವಾಬ್ದಾರಿಗಳನ್ನು ನ. 97ರಲ್ಲಿ ರಾಂಚಿಯಲ್ಲಿ ನಡೆಯುವ ಕೊನೆಯ ಸಿದ್ಧತಾ ಸಭೆಯಲ್ಲಿ ಹಂಚಲಾಗುವುದು.

ಈ ಮುಖ್ಯ ನಿರ್ಧಾರಗಳ ಪ್ರಕಾರ, ಸಮಾವೇಶದ ಯೋಜನೆಯ ವಿವಿಧ ವಿಶಯಗಳನ್ನು ಚರ್ಚಿಸಲಾಯಿತು.

ಹೆಸರು, ದಿನಾಂಕ ಮತ್ತು ಸ್ಥಳ :

ಸಮಾವೇಶವನ್ನು ಡಿಸೆಂಬರ್ **28, 29** ಮತ್ತು **30ನೇ ತಾರೀಖಿನಂದು ಮಹಿಳಾ ಕಾಲೇಜ್ ಮೋರಬಾದಿ, ರಾಂಚಿ,** ಬಿಹಾರ್‌ನಲ್ಲಿ ನಡೆಸಲಾಗುವುದು. ರಾಜ್ಯ ಸಮನ್ವಯ ಸಮಿತಿಯನ್ನು (S.C.C.) ರಚಿಸಲಾಗಿದ್ದು ಕಳೆದ 8 ತಿಂಗಳಿನಿಂದ ಅದು ಉತ್ಸಾಹದಿಂದ, ಚಟುವಟಿಕೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಅವರ ಸಂಪರ್ಕ ವಿಳಾಸ : C/o. Late S. K. Banerjee, Women's College Lane, Nagratoli, Ranchi - 834 001.

ಸಮಾವೇಶಕ್ಕೆ "Sixth National Conference of Women's Movement's ಎಂದು ಇಂಗ್ಲೀಷಿನಲ್ಲಿ ಹಾಗು "ಚಟ್ವಾ ರಾಷ್ಟ್ರೀಯ ನಾರಿ ಮುಕ್ತಿ ಸಂಘರ್ಷ್ ಸಮ್ಮೇಲನ್" ಎಂದು ಹಿಂದಿಯಲ್ಲಿ ಹೆಸರಿಸಲಾಗಿದೆ. ನ್ಯಾಶನಲ್/ರಾಷ್ಟ್ರೀಯ ಎಂಬ ಪದಗಳನ್ನು ಬಲಪಂಥಿಯರು ಉಪಯೋಗಿಸುತ್ತಾರೆಂದು ಅಲ್ಲದೆ ಭಾರತವು ಒಂದು ರಾಷ್ಟ್ರ ಎನ್ನುವುದಕ್ಕಿಂತ ಹಲವು ರಾಷ್ಟ್ರೀಯತೆಗಳ ಸಮೂಹವೆಂದು ಕರೆಯಬಹುದು ಎಂಬ ಕಾರಣಕ್ಕೆ ಹೆಸರಿನ ಕುರಿತ ಭಿನ್ನಾಭಿಪ್ರಾಯವುಂಟಾಗಿತ್ತು.

ಕಾರ್ಯಕ್ರಮ, ಕಮ್ಮಟಗಳು, ವಿಶಯಗಳು ಮತ್ತು ಉಪ-ವಿಶಯಗಳು

ಸಿದ್ಧತಾ ಸಭೆಯಲ್ಲಿ ಸಮಾವೇಶಕ್ಕೆಂದು ಮೂರು ಮುಖ್ಯ ವಿಶಯಗಳನ್ನು ತೀರ್ಮಾನಿಸಲಾಯ್ತು. ಅವೆಂದರೆ ಸ್ಥಳಾಂತರ (Displacement), ಮಹಿಳೆಯರ ಮೇಲಿನ ಹಿಂಸೆ, ರಾಜ್ಯದ ಸ್ತ್ರೀ-ವಿರೋಧಿ ನಿಲುವು. ಸಮಾವೇಶದ ಮೊದಲನೇ ದಿನವನ್ನು ಈ ಮೂರು ವಿಶಯಗಳ ಮೇಲೆ ಕೇಂದ್ರಿಕರಿಸಲಾಗುವುದು. ವಿಶಯಗಳನ್ನು ಬಿಹಾರದ ಗುಂಪುಗಳ ನೃತ್ಯ-ನಾಟಕದ ಮೂಲಕ ಹಾಗು ನಿರೂಪಣೆಯ ಮೂಲಕ ಮೊದಲನೆ ದಿನದ ಬೆಳಗಿನ ಬಹಿರಂಗ ಸಭೆಯಲ್ಲಿ ಪರಿಚಯಿಸಲಾಗುವುದು. ಮಧ್ಯಾನದ ಕಾರ್ಯಕ್ರಮದಲ್ಲಿ ನಡೆಯುವ ಬೇರೆ ಬೇರೆ ಕಮ್ಮಟಗಳಲ್ಲಿ ಮೇಲಿನ ವಿಶಯಗಳನ್ನು ವಿವರವಾಗಿ ಚರ್ಚಿಸಲಾಗುವುದು. ಬೇರೆ ಬೇರೆ ಚಳುವಳಿಗಳು, ಗುಂಪುಗಳು, ವಿವಿಧ ವಿಧಾನಗಳ ಮೂಲಕ ಚರ್ಚಿಸುವರು. ಈ ವಿಶಯಗಳ ಕುರಿತು ಕೆಲಸ ಮಾಡುತ್ತಿರುವ ಗುಂಪು ಮತ್ತು ಚಳುವಳಿಗಳನ್ನು ಸಂಪರ್ಕಿಸಲು Theme-Coordinatorಗಳನ್ನು ಕೋರಲಾಗಿದೆ.

ಉಪ ವಿಶಯಗಳ ನಿರೂಪಣೆ (Sub theme Presentation)ಗಳನ್ನು ಸಮಾವೇಶದ 2ನೇ ದಿನ ನಡೆಸಲಾಗುವುದು. ಸಬ್ ಥೀಮ್‌ಗಳಲ್ಲಿ, ಕಮ್ಮಟಗಳಲ್ಲಿ ಚರ್ಚಿಸಲಾಗುವ ವಿಶಯಗಳನ್ನು ಪಟ್ಟಿಯಲ್ಲಿ ನೀಡಲಾಗಿದೆ. ಆ ವಿಶಯಗಳ ಕುರಿತು ಕೆಲಸ ಮಾಡುತ್ತಿರುವ ಗುಂಪುಗಳನ್ನು ಗುರುತಿಸಿ, ಅವರ ನಿಲುವುಗಳನ್ನು, ಕೆಲಸಗಳನ್ನು ಹಂಚಿಕೊಳ್ಳಲು ಕರೆಯುವುದು, Theme Co-ordinatersಗಳ ಜವಾಬ್ದಾರಿ, ಪ್ರದರ್ಶನ, ಚರ್ಚೆ ಇತ್ಯಾದಿ ಮೂಲಕ ವಿಶಯಗಳನ್ನು ಮಂಡಿಸಬಹುದು. ಈ ಎಲ್ಲಾ ಕಮ್ಮಟಗಳು. ಏಕಕಾಲದಲ್ಲಿ ನಡೆಯುತ್ತವೆ. ವಿಶೇಷ ಆಸಕ್ತಿ ಗುಂಪುಗಳ ಸಭೆಗೂ ಸೌಲಭ್ಯವಿದೆ.

ಕೊನೆಯ ದಿನವನ್ನು ಮುಖ್ಯವಾಗಿ ವಿವಿಧ ಸೆಶೆನ್‌ಗಳಲ್ಲಿ ನಡೆದ ಚರ್ಚೆಯ ವರದಿಗೆ, ವಿವಿಧ ಭಾಷೆಗಳಲ್ಲಿ ನಿರ್ಣಾಯಕಗಳನ್ನು ಮಂಡಿಸಲು ಮೀಸಲಿರಿಸಿದೆ. ನಿರ್ಣಾಯಕಗಳು ಥೀಮ್ ಸೆಶನ್‌ಗಳ ಚರ್ಚೆಯಲ್ಲಿ ಮೂಡಿರಬೇಕು ಮತ್ತು ಅದನ್ನು ಮೂರನೆ ದಿನ ಚರ್ಚೆಗೆ ಇಡುವುದಿಲ್ಲ. ನಿರ್ಣಾಯಕಗಳ ಮಂಡನೆಗೆ ಕುರಿತಂತೆ ವಿವರಗಳನ್ನು ನಿರ್ವಾಹಕರುಗಳ (Co-ordinator) ಕೈಪಿಡಿಯಲ್ಲಿ ನೀಡಲಾಗಿದೆ. ಮೂರನೇ ದಿನ ಮಧ್ಯಾನ ರ್‍ಯಾಲಿ ಹಾಗು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿದೆ. ಕೊನೆಯ ಸಿದ್ಧತಾ ಸಭೆಯಲ್ಲಿ ಸಾರ್ವಜನಿಕ ಸಭೆಯ ಭಾಷಣಕಾರರನ್ನು ಕುರಿತು ತೀರ್ಮಾನಿಸಲಾಗುವುದು.

ವಿವರಗಳ ಪಟ್ಟಿ

ದಿನಾಂಕ	ಕಾರ್ಯಕ್ರಮ	ನಿರ್ವಾಹಕರು (Co-ordinators)
28 ಡಿಸೆಂಬರ್		
10-10.30 ಬೆಳಗ್ಗೆ	ಸ್ವಾಗತ	ರಾಜ್ಯ ಸ. ಸ. ಸದಸ್ಯರಿಂದ
10.30 - 11.00	ಮಹಿಳಾ ಚಳುವಳಿಗಳ ಕುರಿತು ನಿರೂಪಣೆ	ರಾಷ್ಟ್ರೀಯ ಸ.ಸ. ಸದಸ್ಯರಿಂದ
11-12	ನೃತ್ಯ ನಾಟಕ	ಬಿಹಾರ್‌ನ ಗಂಪುಗಳು
	ವಿಶಯಗಳ ಕುರಿತು ಬಹಿರಂಗ ಸಭೆ (Theme Plenaries)	ನಿರ್ಧಾರವಾಗಬೇಕಿದೆ.
2.30-5.30	ಮೂರು ಕೇಂದ್ರ ವಿಶಯಗಳ ಕುರಿತ ಸೆಶನ್	
	ಸ್ಥಳಾಂತರ	ನಾರಿಮುಕ್ತಿವಾಹಿನಿ - ಬಿಹಾರ್ ಸ್ವಾಶ್ರಯ - ಬರೋಡ
	ರಾಜ್ಯದ ಸ್ತ್ರೀ ವಿರೋಧಿ ಗುಣ	ಮಹಿಳಾ ಉತ್ಪೀಡನ್ ವಿರೋಧಿ ಸಂಘರ್ಷ ಸಮಿತಿ - ಬಿಹಾರ್, ಫೋರಂ - ಬಾಂಬೆ, ಸಹೇಲಿ-ದೆಹಲಿ
	ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ	ಮಹಿಳಾ ಜಾಗೃತಿ-ಬಿಹಾರ್ ಜಾಗೋರಿ - ದೆಹಲಿ
ಸಂಜೆ	ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ / ಮೂಲಕ ಭಾಗವಹಿಸುವವರ ಪರಿಚಯ	
29, ಡಿಸೆಂಬರ್	ಏಕಕಾಲಿಕವಾಗಿ ನಡೆವ ವಿವಿಧ ಸೆಶೆನ್‌ಗಳು	
	ವಿಷಯ -	
	* ಆದಿವಾಸಿ ಮಹಿಳೆಯರು	ಪ್ರೇರಣಾ ಭಾರತಿ - ಬಿಹಾರ್
	* ದಲಿತ ಮಹಿಳೆಯರು	– –
	* ಮುಸ್ಲಿಂ ಮಹಿಳೆಯರು	ಆವಾಜ್-ಏ-ನಿಸ್ವಾನ್, ಬಾಂಬೆ
	* ಲಿಂಗ ಸಮಾನ ಕಾನೂನು	ಫೋರಂ - ಬಾಂಬೆ
	* ನೈಸರ್ಗಿಕ ಸಂಪನ್ಮೂಲಗಳು	ಪಿ. ಆರ್. ಇ. ಎಂ. ಒರಿಸ್ಸಾ

* ಲೈಂಗಿಕತೆ — ಫೋರಂ, ಸ್ತ್ರೀ ಸಂಗಂ - ಬಾಂಬೆ
* ಮಹಿಳಾ ಚಳುವಳಿಯ ವಿವಿಧ ದೃಷ್ಟಿಕೋನಗಳು — ಸ್ತ್ರೀಚೇತನ, ನಾಗ್‌ಪುರ
* ಕೋಮುವಾದ — ಸಹ್‌ಯಾರ್, ಬರೋಡ
* ಆರೋಗ್ಯ — ಜಾಗೋರಿ, ದೆಹಲಿ, ಸ್ಪಂದನ, ಆಂ. ಪ್ರ.
* ಕುಟುಂಬ ಮತ್ತು ಬೆಂಬಲ ರಚನೆಗಳು — ವುಮೆನ್ಸ್ ಸೆಂಟರ್, ಬಾಂಬೆ-ಸ್ಪಂದನ ಆಂ. ಪ್ರ.
* ಮಹಿಳೆ ಮತ್ತು ದುಡಿಮೆ — ಪ್ರಗತಿಶೀಲ ಮಹಿಳಾ ಸಂಘಟನಾ ಚಂದ್ರಪುರ್

ವಿಶೇಷ ಸಂಜೆ ಸಭೆಗಳು ಮತ್ತು ಕಮ್ಮಟಗಳು

* ಮಹಿಳೆಯರನ್ನು ಪ್ರೀತಿಸುವ ಮಹಿಳೆಯರು - ಸಭೆ — ಸ್ತ್ರೀ ಸಂಗಂ - ಬಾಂಬೆ
* ರಾಷ್ಟ್ರೀಯತೆ ಹೋರಾಟಗಳು — ಪಿ. ಎಂ. ಎಸ್. - ದೆಹಲಿ
* ಅನಿವಾಸಿ ಭಾರತೀಯ ಮಹಿಳೆಯರು ಮತ್ತವರ ಸಮಸ್ಯೆಗಳು — ಪಿ. ಎಂ. ಎಸ್. ದೆಹಲಿ

30, ಡಿಸೆಂಬರ್ — ಕಮ್ಮಟದ ವರದಿಗಳು ಮತ್ತು ನಿರ್ಣಾಯಕಗಳನ್ನು ಹಂಚಿಕೊಳ್ಳುವ ಬಹಿರಂಗ ಸಭೆ
ರ್‍ಯಾಲಿ
ಸಾರ್ವಜನಿಕ ಸಭೆ

ಇಲ್ಲಿಯವರೆಗೆ, ಸಭೆಯಲ್ಲಿ ಭಾಗವಹಿಸಿದವರು ಅಥವಾ ನಿರ್ವಹಣೆ (ಕೊ-ಆರ್ಡಿನೇಟ್) ಮಾಡಲು ಸಮ್ಮತಿಸಿಯೂ ಭಾಗವಹಿಸಲಾಗದಿದ್ದವರನ್ನಷ್ಟೆ ನಿರ್ವಾಹಕರು (Co-ordinator)ಗಳನ್ನಾಗಿ ನೇಮಿಸಲಾಗಿದೆ. ಈಗಿರುವ ನಿರ್ವಾಹಕರು (Co-ordinator)ಗಳ ಜೊತೆಯಲ್ಲಿ ಮೇಲೆ ತಿಳಿಸಿರುವ ವಿಶಯಗಳ ನಿರ್ವಹಣೆ ಮಾಡಲು, ಕಮ್ಮಟ ನಡೆಸಲಿಚ್ಚಿಸುವವರು ಫೋರಂ-ಬಾಂಬೆ ಇವರನ್ನು ಸಂಪರ್ಕಿಸಲು ಕೋರಲಾಗಿದೆ. ವಿಶಯ ಹಾಗು ಕಮ್ಮಟಗಳನ್ನು ನೋಡಿಕೊಳ್ಳಲು ಫೋರಂನವರು ಮುಂದೆ ಬಂದಿದ್ದಾರೆ. ಎಲ್ಲಾ ಕೋ-ಆರ್ಡಿನೇಟರ್‌ಗಳು ಕೊನೆಯ ಹಾಗು ಅಂತಿಮ ಸಿದ್ದತಾ ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸಲೇಬೇಕು. ತಪ್ಪಿದಲ್ಲಿ theme ಅನ್ನು ಕೋ ಆರ್ಡಿನೇಟ್ ಮಾಡಲು ಅವಕಾಶವಿರುವುದಿಲ್ಲ. ವಿಷಯವನ್ನೆ ರದ್ದು ಪಡಿಸುವ ಸಂದರ್ಭ ಬಂದರೂ ಸರಿಯೇ.

Theme Co-ordinatorsಗಳಿಗೆ ಕೈಪಿಡಿಯನ್ನು ರಚಿಸುವ ಅವಶ್ಯಕತೆ ಕುರಿತು ಯೋಚಿಸಲಾಯಿತು. ಸಭೆಯಲ್ಲಿ ಬಂದ ಸಲಹೆಗಳನ್ನು ನಡಾವಳಿಯೊಂದಿಗೆ ನೀಡಲಾಗಿದೆ ಹಾಗು ಫೋರಂನವರ ಬಳಿ ಲಭ್ಯವಿದೆ. ಅವರ ವಿಳಾಸ - Forum against oppression of women, 29, Bhatia Bhavan, Babrekar Marg, Off Gokhale Road, Dadar (W), Bombay - 400 028.

ಸಮಾವೇಶಕ್ಕೆ ಯೋಜನೆ :

ಕಳೆದ ಸಮಾವೇಶದ ನಂತರ ಹಾಗು ಸಂಘಟನಾಕಾರರಾಗಿ ನಾವು ಮಾಡಿದ ಅವ್ಯವಸ್ಥೆಯಿಂದುಂಟಾದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಈ ಭಾರಿಯ ಸಮಾವೇಶದ ಸಂಚಾಲನೆಯ ಕುರಿತ (logistics) ಯೋಜನೆಗೆ ಹೆಚ್ಚಿನ ಗಮನ ನೀಡಲಾಗಿದೆ. ನಾಗಪುರದ ಸಿದ್ದತಾ ಸಭೆಯಲ್ಲಿಯೆ ಯೋಜನೆಗೆ ಸಂಬಂಧಪಟ್ಟಂತೆ ಹೆಚ್ಚಿನಂಶವನ್ನು ನಿರ್ಧರಿಸಲಾಗಿತ್ತು. ಐದನೆ ಸಭೆಯಲ್ಲಿ ರಾಷ್ಟ್ರೀಯ ಸ. ಸ. ಸದಸ್ಯರು ನಿರ್ದಿಷ್ಟ ಜವಾಬ್ದಾರಿ ಹಾಗು ಕೆಲಸಗಳನ್ನು ತೆಗೆದುಕೊಂಡರು. ಈ ಸಮಾವೇಶ ಕುರಿತಂತೆ ಒಂದು ಮುಖ್ಯ ನಿರ್ಧಾರವೇನೆಂದರೆ ಮಹಿಳೆಯರು ಮುಂಚಿತವಾಗಿಯೆ ನೊಂದಾಯಿಸಿಕೊಳ್ಳಬೇಕು. 31 ಅಕ್ಟೋಬರ್ 1997ರ ಒಳಗೆ

ನೊಂದಾಯಿಸಲ್ಪಟ್ಟವರಿಗೆ ಮಾತ್ರ ಊಟದ ಸೌಲಭ್ಯ ಒದಗಿಸುವ ಜವಾಬ್ದಾರಿಯನ್ನು ರಾಜ್ಯ ಹಾಗು ರಾಷ್ಟ್ರೀಯ ಸ. ಸ. ತೆಗೆದುಕೊಂಡಿದೆ. ನೋಂದಾಯಿಸಿಕೊಳ್ಳದೆ ಬರುವ ಮಹಿಳೆಯರಿಗೆ ಉಳಿದುಕೊಳ್ಳುವ ವ್ಯವಸ್ಥೆ ಉಂಟು. ಆದರೆ ಊಟದ ವ್ಯವಸ್ಥೆಯನ್ನು ಮಾಡಲಾಗುವುದಿಲ್ಲ. ಸ್ಟಾಲ್‌ಗಳಲ್ಲಿ ಕಡಿಮೆ ಬೆಲೆಗೆ ತಿನಿಸುಗಳ ವ್ಯವಸ್ಥೆ ಮಾಡಲಾಗುವುದು. ಸಮಾವೇಶದ ನೋಂದಾವಣಿ ಅರ್ಜಿಗಳು, ಕರಪತ್ರ, ವೇಳಾಪಟ್ಟಿಯನ್ನು ಬೇರೆ ಬೇರೆ ಗುಂಪುಗಳಿಗೆ ತಲುಪಿಸಲಾಗುವುದು. ರಾಷ್ಟ್ರೀಯ ಸ. ಸ.ದವರು ಸಮಾವೇಶದ ಪ್ರಕಟಣೆ (Declaration) ಮತ್ತು ಕರೆ ಪತ್ರವನ್ನು ಇಂಗ್ಲೀಷ್ ಹಾಗು ಹಿಂದಿಯಲ್ಲಿ ಪ್ರಕಟಿಸುವರು. (ಇದನ್ನು ಇತರೆ ಭಾಷೆಗಳಿಗೆ ಅನುವಾದಿಸುವುದು, ಭಿತ್ತಿಚಿತ್ರಗಳು ಹಾಗು ಇತರೆ ಪ್ರಚಾರ materialಗಳು ಸ್ಥಳೀಯ ಹಾಗು ಪ್ರಾಂತೀಯ ಗುಂಪುಗಳ ಜವಾಬ್ದಾರಿ).

ಸಹೇಲಿ ಹಾಗು ಜಾಗೋರಿ ಗುಂಪುಗಳು ಶೇ. 25 ರೈಲ್ವೆ ರಿಯಾಯಿತಿಗೆ ಪ್ರಯತ್ನಿಸುವುದಾಗಿ ಹೇಳಿವೆ.

ರಾಷ್ಟ್ರೀಯ ಹಾಗು ರಾಜ್ಯ ಸ.ಸ.ಯ ಸದಸ್ಯರನ್ನೊಳಗೊಂಡ ಚಾಲನ ಸಮಿತಿ (Steering Committee)ಯನ್ನು ರೂಪಿಸಲು ತೀರ್ಮಾನವಾಗಿದೆ. ಸಮಿತಿಯ ಸದಸ್ಯರನ್ನು ಹಾಗು ಜವಾಬ್ದಾರಿಗಳನ್ನು ಅಂತಿಮ, ಸಿದ್ಧತಾ ಸಭೆಯಲ್ಲಿ ತೀರ್ಮಾನಿಸಲಾಗುವುದು. ಸಮಾವೇಶದ logisticsಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳುವ ಎಲ್ಲಾ ಜವಾಬ್ದಾರಿಗಳಿಗೂ ಸಮಿತಿಯೇ ಹೊಣೆಯಾಗುತ್ತದೆ.

ಮುಂಗಡ ಪತ್ರ ಹಾಗು ಹಣ ಸಂಗ್ರಹಣೆ

ಈ ಸಮಾವೇಶಕ್ಕೆ ತಗುಲುವ ಒಟ್ಟು ಖರ್ಚು ಈ ಕೆಳಕಂಡಂತೆ ಇದೆ.

ಊಟ ಮತ್ತು ವಸತಿ 3,000 ಮಹಿಳೆಯರಿಗೆ	4,50,000.00
2,000 (ನೊಂದಾಯಿಸಿದ) ಮಹಿಳೆಯರಿಗೆ ವಸತಿ	1,00,000.00
ಮುದ್ರಣ ಮತ್ತು ಪ್ರಚಾರ	60,000.00
ಸಮಾವೇಶದ ಮೊದಲಿನ ಕಛೇರಿ ವೆಚ್ಚ	40,000.00
ಸ್ಥಳೀಯ ಸಾರಿಗೆ	20,000.00
ಸಂಪರ್ಕ, ಅಂಚೆ ಮತ್ತು ದೂರವಾಣಿ	20,000.00
ಜೆರಾಕ್ಸ್	5,000.00
ಸ್ಟೇಜ್, ಮೈಕ್ ವ್ಯವಸ್ಥೆ ಇತ್ಯಾದಿ	50,000.00
ಕ್ರೀಚ್ ಮತ್ತು ಮಾಧ್ಯಮ ಸೌಲಭ್ಯ	5,000.00
ಲೇಖನ ಸಾಮಗ್ರಿ	10,000.00
ಟಿ.ವಿ, ವಿ.ಸಿ.ಆರ್, ಟೈಪ್‌ರೈಟರ್ ಇತ್ಯಾದಿ	5,000.00
ಇತರೆ ಖರ್ಚು	50,000.00
ವರದಿ	50,000.00
ಒಟ್ಟು -	**8,65,000.00**

ಮುಂಗಡ ಪತ್ರವನ್ನು ಸುಮಾರು 3,000 ಮಹಿಳೆಯರು ಸಭೆಯಲ್ಲಿ ನೊಂದಾಯಿಸಿಕೊಳ್ಳುವರು ಎಂಬ ಅಂದಾಜಿನ ಮೇಲೆ ತಯಾರಿಸಲಾಗಿದೆ. ನೊಂದಾವಣಿಯನ್ನು ಖಡ್ಡಾಯ ಮಾಡಿದರೂ, ನೊಂದ್ಣಾವಣಿಯಿಲ್ಲದೆ ಬರುವ ಮಹಿಳೆಯರು ಸುಮಾರು 2,000ವೆಂದು ಲೆಕ್ಕ ಹಾಕಲಾಗಿದೆ. ಆದ್ದರಿಂದ 3,000 ಜನ ಮಹಿಳೆಯರಿಗೆ ಊಟದ ವ್ಯವಸ್ಥೆ ಹಾಗೂ 5,000 ಜನ ಮಹಿಳೆಯರಿಗೆ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ. ಮೂರು ದಿನಗಳ ಊಟ, ವಸತಿ ವ್ಯವಸ್ಥೆಗೆ ಒಬ್ಬರಿಗೆ ರೂ. 150/- ಹಾಗು ರೂ. 300/- ಕೊಟ್ಟು ನೊಂದಾಯಿಸಿಕೊಳ್ಳುವ ವ್ಯವಸ್ಥೆಯಿದೆ.

ಸುಮಾರು 500 ಮಹಿಳೆಯರು ರೂ. 300/- ಕೊಟ್ಟು ನೊಂದಾಯಿಸಿಕೊಳ್ಳಬಹುದು ಹಾಗು ಉಳಿದವರು ರೂ. 150/-ರಂತೆ ನೊಂದಾಯಿಸಿಕೊಂಡರೆ ಅದರಿಂದ ಸಿಗುವ ಹಣ ರೂ. 5,25,000/- ಎಂದು ಅಂದಾಜು ಮಾಡಲಾಗಿದೆ. ಕೊನೆ ಗಳಿಗೆಯಲ್ಲಿ ಬರುವವರು ಕನಿಷ್ಟ ನೊಂದಾವಣಿ ಫೀ ರೂ. 10/- ಅಥವಾ ರೂ. 50/-ನ್ನು ನೀಡಬೇಕು ಇದರಿಂದ 40,000/- ಸಂಗ್ರಹವಾಗುವುದು. ಉಳಿದ 3,00,000/-ವನ್ನು ಸಂಗ್ರಹಿಸಬೇಕಾಗಿದೆ.

ಬೇರೆ ಬೇರೆ ಗುಂಪುಗಳು ತಾವು ಸಾಧ್ಯವಾಗುವ ಕನಿಷ್ಟ ಮೊತ್ತವನ್ನು ಸಂಗ್ರಹಿಸುವುದಾಗಿ ಹೇಳಿದ್ದಾರೆ. ಆ ವಿವರ ಈ ರೀತಿ ಇದೆ.

ಸಂಸ್ಥೆ ಹೆಸರು	ಮೊಬಲಗು
F.A.D.W, Bombay	25,000/-
ವುಮೆನ್ಸ್ ಸೆಂಟರ್ ಬಾಂಬೆ	5,000/-
ಪುರೋಗಾಮಿ ಮಹಿಳಾ ಸಂಘಟನ, ಬಾಂಬೆ	5,000/-
ಸ್ತ್ರೀ ಚೇತನ, ನಾಗ್‌ಪುರ್	5,000/-
ಪ್ರಗತಿಶೀಲ್ ಮಹಿಳಾ ಸಂಘಟನ, ಬಲ್ಲಾಪುರ	5,000/-
ಸಹಿಯಾರ್	5,000/-
ಸ್ವಾಶ್ರಯ	2,000/-
PREM ಒರಿಸ್ಸಾ	5,000/-
ಸಹೇಲಿ ದೆಹಲಿ	5,000/-
ಜಾಗೋರಿ ದೆಹಲಿ	10,000/-
ಮಹಿಳಾ ಜಾಗೃತಿ ಗೋಮಿಯ	5,000/-
ಮದುಪುರ, ಬಿಹಾರ್ ಗುಂಪುಗಳು	10,000/-
ಜೆಮ್‌ಶೆಡ್‌ಪುರ್ ಗುಂಪುಗಳು	10,000/-
ರಾಂಚಿ ಗುಂಪುಗಳು	10,000/-
ನಾರೀಮುಕ್ತಿವಾಹಿನಿ	1,000/-
	1,08,000/-

ರಾಜ್ಯ ಸ.ಸ.ಯು ಸಮಾವೇಶದವರೆಗೆ ರೂ. 1,00,000/- ಸ್ಥಳೀಯ ವೆಚ್ಚಕ್ಕೆ ಖರ್ಚಾಗುವುದೆಂದು ಅಂದಾಜು ಪಟ್ಟಿ ನೀಡಿದೆ. ಆದ್ದರಿಂದ ರಾಜ್ಯ ಸ.ಸ.ಯ ಕಾರ್ಯಾಚರಣೆಗೆ ಸಹಕರಿಸಲು ಆದಷ್ಟು ಬೇಗ ಹಣವನ್ನು ಕಳುಹಿಸಬೇಕೆಂದು ರಾಷ್ಟ್ರೀಯ ಸ.ಸ.ಯ ಸದಸ್ಯರನ್ನು ಕೋರಿದೆ. ಸಮಾವೇಶದ ಪರವಾಗಿ ಜಾಗೋರಿಯವರು ಹಣ ಸಂಗ್ರಹಣೆಯನ್ನು Co-ordinate ಮಾಡಲು ಒಪ್ಪಿಕೊಂಡಿರುತ್ತಾರೆ. ರಸೀದಿ ಪುಸ್ತಕ ಅಥವಾ ಇತರೆ ಮಾಹಿತಿ ಬೇಕಾದವರು ಜಾಗೋರಿಯವರನ್ನು ಸಂಪರ್ಕಿಸಬೇಕು. ಅವರ ವಿಳಾಸ Jagori C-54 South extension, 11, New Delhi - 110 049.

ಹಣ ಸಂಗ್ರಹಣೆಗೆ ಹೆಚ್ಚಿನ ಶ್ರಮ ಹಾಕಬೇಕಾಗಿದೆ. ಸಾಧ್ಯವಾದಷ್ಟು ಸಂಘಟನೆಗಳನ್ನು ಸಂಪರ್ಕಿಸಿ ಇದನ್ನು ಸಾಧ್ಯವಾಗಿಸುವ ಅವಶ್ಯಕತೆಯಿದೆ. ಮೊದಲೆ ನೊಂದಾಯಿಸಿಕೊಳ್ಳಲು ಒತ್ತು ನೀಡಬೇಕು. ಭಾಗವಹಿಸುವವರ, ಸಂಘಟಕರ ನಡುವಿನ ಸಹಕಾರದಿಂದಲೆ ಸಮಾವೇಶವು ಯಶಸ್ವಿಯಾಗಬೇಕು. ಹಣ ಸಂಗ್ರಹಣೆಯಲ್ಲದೆ ರಿಯಾಯತಿ ದರದಲ್ಲಿ ಮುದ್ರಣ, ಲೇಖನ ಸಾಮಗ್ರಿ, ಬ್ಯಾನರ್‌ಗಳು ಮತ್ತು ಧವಸ ಧಾನ್ಯ ಸಂಗ್ರಹವೂ ಹೆಚ್ಚು ಸಹಾಯಕ.

ಅಂತಿಮ ಸಿದ್ಧತಾ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು

* ಸೆಶನ್ಸ್ ಹಾಗು ವರ್ಕ್ ಶಾಪ್‌ಗಳ ಯೋಜನೆ ಕುರಿತು ವಿಶಯ ನಿರ್ವಾಹಕರು (Theme Co-ordinator)ಗಳ ನಿರೂಪಣೆ.
* ಮೊದಲ ದಿನದ ಬಹಿರಂಗ ಸಭೆಗೆ ಪರಿಚಯ ಭಾಷಣಕ್ಕೇ ಹಾಗು ಸಾರ್ವಜನಿಕ ಸಭೆಗೆ ಭಾಷಣಕಾರರನ್ನು ನಿರ್ಧರಿಸುವುದು.
* ಚಾಲನ ಸಮಿತಿ ರಚನೆ ಹಾಗು ಅದರ ಜವಾಬ್ದಾರಿಗಳು.
* ನಿರ್ಣಾಯಕಗಳನ್ನು ಸಂಗ್ರಹಿಸುವ ಸಮಿತಿ ರಚನೆ.
  ಸ್ವಯಂಸೇವಕರ ಪಟ್ಟಿಯ ನಿರ್ಮಾಣಕ್ಕೆ ಸಂಬಂಧಪಟ್ಟ ಕೆಲಸಗಳ ಹಂಚಿಕೆ.
* ಆಯ-ವ್ಯಯ ಪಟ್ಟಿಯ ಹಣ ಸಂಗ್ರಹಣೆಯ ಪರಿಶೀಲನೆ.

ಸೂಚನೆ : ರಾಜ್ಯ ಸ.ಸ.ಯು ಅಂತಿಮ ಸಿದ್ಧತಾ ಸಭೆಯ ಸ್ಥಳ ಹಾಗು ದಿನಾಂಕ ಗೊತ್ತುಪಡಿಸಿ ಒಂದು ತಿಂಗಳು ಮೊದಲೆ ಸಂಬಂಧಪಟ್ಟ ಎಲ್ಲಾ ಗುಂಪುಗಳಿಗೆ ತಿಳಿಸಬೇಕು.

ಥೀಮ್ ಕೋ-ಆರ್ಡಿನೇಟರ್‌ಗಳಿಗೆ ಕೈಪಿಡಿ

* ಥೀಮ್ಸ್ ಹಾಗು ಸಬ್-ಥೀಮ್ಸ್‌ಗಳು ವಿಸ್ತಾರವಾದ ಕ್ಷೇತ್ರವನ್ನೊಳಗೊಂಡಿದೆ. ಆ ವಿಶಯ ಕುರಿತು ಕೆಲಸ ಮಾಡುತ್ತಿರುವ ಗುಂಪುಗಳನ್ನು ಗುರುತಿಸಿ ಅವರುಗಳು ತಮ್ಮ ಕೆಲಸವನ್ನು ಹಾಗು ನಿಲುವನ್ನು ಕುರಿತು ಹಂಚಿಕೊಳ್ಳಲು ಹಾಗು ಚರ್ಚಿಸಲು ಕರೆಯುವುದು ಥೀಮ್ ಕೋಆರ್ಡಿನೇಟರ್‌ಗಳ ಜವಾಬ್ದಾರಿ. ವಿಶಯನ್ನು ಪ್ರದರ್ಶನ, ಮಾತುಕತೆ ಇತ್ಯಾದಿ ಮೂಲಕ ನಿರೂಪಿಸಬಹುದು.
* ವಿಶಯ ಕುರಿತು ವಿವಿಧ ಗುಂಪುಗಳಿಂದ, ವಿವಿಧ ನಿಲುವುಗಳನ್ನು ಮಂಡಿಸಲು ಅವಕಾಶ ನೀಡಬೇಕು. ಅಲ್ಲದೆ ತಮ್ಮ ಹೋರಾಟದ ಪ್ರಕ್ರಿಯೆಯಲ್ಲಿ ಮೂಡಿದ ಪರ್ಯಾಯ ಗುಂಪುಗಳು ಹಂಚಿಕೊಳ್ಳುವುದಕ್ಕೆ ವಿಶೇಷ ಒತ್ತು ನೀಡಬೇಕು.
* ಥೀಮ್ ಕೋ ಆರ್ಡಿನೇಟರ್‌ಗಳು ಸೆಶನ್‌ಗಳನ್ನು ಯಾವ ರೀತಿ ಸಂಯೋಜಿಸಬೇಕೆಂದರೆ ವರ್ಕ್‌ಶಾಪ್‌ನ ವಿಶಯಗಳು ಹಂಚಿಕೊಳ್ಳುವುದಕ್ಕಷ್ಟೆ ಸೀಮಿತವಾಗದೆ ವಿಸ್ತಾರವಾದ ಚರ್ಚೆಗೆ ಎಡೆಮಾಡಿಕೊಡಬೇಕು.
* ತಮ್ಮ ವರ್ಕ್‌ಶಾಪ್‌ಗಳಿಗೆ, ವರ್ಕ್‌ಶಾಪ್‌ನ ಕೋಆರ್ಡಿನೇಟರ್‌ಗಳೇ ಜವಾಬ್ದಾರರು.
* ವರ್ಕ್‌ಶಾಪ್ ಕೋ ಆರ್ಡಿನೇಟರ್‌ಗಳು, ಥೀಮ್ ಕೋಆರ್ಡಿನೇಟರ್‌ಗಳಿಬ್ಬರೂ ಸೇರಿ ಬಹು-ಭಾಷಾ ಸೆಶನ್ಸ್‌ಗಳ ಏರ್ಪಾಡು ಮಾಡಬೇಕು. ವರದಿಗಳ ಹಾಗು ನಿರ್ಣಾಯಕಗಳ (resolutions) ಅನುವಾದದ ವ್ಯವಸ್ಥೆಯನ್ನು ಮಾಡಬೇಕು.
* ವರ್ಕ್ ಶಾಪ್ ಹಾಗು ವರ್ಕ್ ಶಾಪ್‌ನ ವಿವಿಧ ಥೀಮ್‌ಗಳ ನಡಾವಳಿಗಳನ್ನು ಮೂರನೆ ದಿನದ ಬೆಳಗಿನ ಬಹಿರಂಗ ಸಭೆಯಲ್ಲಿ ಮಂಡಿಸಲಾಗುವುದು. ಭಾಷಾ ಗುಂಪುಗಳನ್ನಾಧರಿಸಿ ಬಹಿರಂಗ ಸಭೆಯನ್ನು ನಡೆಸಲಾಗುವುದು. ಬಹಿರಂಗ ಸಭೆಯಲ್ಲಿ ಮಂಡಿಸಲು ವರದಿಗಳನ್ನು ಸಿದ್ಧಪಡಿಸುವುದು. ಹಾಗು ವಿವಿಧ ಭಾಷೆಗಳಲ್ಲಿ ಅದರ ಅನುವಾದದ ವ್ಯವಸ್ಥೆಯನ್ನು ಮಾಡುವುದು ಥೀಮ್ ಕೋ-ಆರ್ಡಿನೇಟರುಗಳ ಜವಾಬ್ದಾರಿ.
* ಎರಡನೇ ದಿನದ ಕೊನೆಗೆ, ಸಂಕ್ಷಿಪ್ತ ಪತ್ರಿಕಾ ಟಿಪ್ಪಣಿಯನ್ನು ಹಾಗು ಸಮಾವೇಶದ ವರದಿಗೆ, ವಿವರವಾದ ವರದಿಯನ್ನು ಥೀಮ್ ಕೋ ಆರ್ಡಿನೇಟರ್‌ಗಳು ತಯಾರಿಸಬೇಕು.

ನಿರ್ಣಾಯಕಗಳು

ನಿರ್ಧಿಷ್ಟ ವಿಶಯಕ್ಕೆ ಸಂಬಂಧಪಟ್ಟ ನಿರ್ಣಾಯಕಗಳನ್ನು ಸೆಶನ್‌ಗಳಲ್ಲೆ ಮಂಡಿಸಲಾಗುವುದು. ಅವನ್ನು ಬಹಿರಂಗ ಸಭೆಯಲ್ಲಿ ವರದಿ ಮಾಡಲಾಗುವುದು. ಆದರೆ ಅಲ್ಲಿ ಅದನ್ನು ಚರ್ಚಿಸಲಾಗುವುದಿಲ್ಲ. ಭಿನ್ನಾಭಿಪ್ರಾಯಗಳನ್ನು ಮಾತ್ರ ದಾಖಲಿಸಲಾಗುವುದು. ಈ ವಿಶಯವನ್ನು ಥೀಮ್ ಕೋ ಆರ್ಡಿನೇಟರ್‌ಗಳು ವರ್ಕ್‌ಶಾಪಿನಲ್ಲಿ ಹೇಳಬೇಕು. ಹೇಳುವುದರಿಂದ ಆಸಕ್ತರು ನಿರ್ಣಾಯಕಗಳನ್ನು ಕುರಿತ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು.

ನಿರ್ಣಾಯಕಗಳು ಕನಿಷ್ಟ ಸಂಖ್ಯೆಯಲ್ಲಿರಬೇಕು. ನಿರ್ಣಾಯಕವು ಥೀಮ್‌ಗೆ ಅನುಗುಣವಾಗಿ, ಒಂದು ಪ್ಯಾರಾಗ್ರಾಫ್‌ನಲ್ಲಿ ರಾಜಕೀಯ ಹೇಳಿಕೆಯ ರೂಪದಲ್ಲಿದ್ದರೆ ಸೂಕ್ತ. ಈ ಹೇಳಿಕೆಯು ವರ್ಕ್‌ಶಾಪ್/ಸೆಶನ್‌ಗಳಲ್ಲಿ ಚರ್ಚಿಸಿದ ಮುಖ್ಯ ವಿಶಯಗಳ ಸಾರಾಂಶವನ್ನೊಳಗೊಂಡಿರಬೇಕು.

ಇದು ಇತರ ಎಲ್ಲಾ ಹೋರಾಟ ಮತ್ತು ಆಂದೋಲನಗಳಿಂದ ಅನುಗೊಂಡ ನಿರ್ಣಾಯಕಗಳ ಜೊತೆಯಾಗಿ ಹೋಗುವುದು. ಸಹಿ ಸಂಗ್ರಹಣಾ ಆಂದೋಲನ ಇತ್ಯಾದಿಯನ್ನು ಪ್ರಾರಂಭಿಸಲು ತಕ್ಷಣವೇ ಉಪಯೋಗಿಸಿಕೊಳ್ಳಬಹುದು.

ನಿರ್ಣಾಯಕಗಳು - 6ನೇ ರಾಷ್ಟ್ರೀಯ ಸಮಾವೇಶದ ವರ್ಕ್‌ಶಾಪಿನಲ್ಲಿ ಕೈಗೊಂಡ ನಿರ್ಣಯ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಅವಶ್ಯಕವಿದ್ದೆಡೆ ಭಿನ್ನಾಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ನಿರ್ಣಾಯಕಗಳನ್ನು ಸಂಗ್ರಹಿಸಲು ಸಮಿತಿಯನ್ನು ಮಾಡಲಾಗುವುದು. ತಮ್ಮ ತಮ್ಮ ಸೆಶನ್‌ಗಳಲ್ಲಿ ಮಂಡಿಸಿದ ನಿರ್ಣಾಯಕಗಳನ್ನು ವರ್ಕ್‌ಶಾಪ್ ಕೋ ಆರ್ಡಿನೇಟರ್‌ಗಳು ಈ ಸಮಿತಿಗೆ ನೀಡಬೇಕು.

ಯಾವುದೆ ನಿರ್ಧಿಷ್ಟ ಆಂದೋಲನ, ಹೋರಾಟ ಇತ್ಯಾದಿ ಕುರಿತ ನಿರ್ಧಿಷ್ಟ ನಿರ್ಣಾಯಕಗಳನ್ನು ಯಾರಾದರು ಮಂಡಿಸಬೇಕೆಂದಿದ್ದರೆ ಅವರು ಅದನ್ನ ಸಮಿತಿಗೆ ಒಪ್ಪಿಸಬೇಕು. ನಂತರ ಅದನ್ನು ಬಹಿರಂಗ ಸಭೆಯಲ್ಲಿ ಮಂಡಿಸಬಹುದು.

ಸ್ಥಳಾಂತರದ ಸಮಸ್ಯೆ ಮತ್ತು ಮಹಿಳೆ

ಬೀನಾ ಶ್ರೀನಿವಾಸ್

ಅಭಿವೃದ್ಧಿಯ ಪರಿಕಲ್ಪನೆಯು ರಾಷ್ಟ್ರೀಯ ಮಹತ್ವವನ್ನು ಪಡೆಯುತ್ತಿದ್ದ ಹಾಗೆ ಈ ಅಭಿವೃದ್ಧಿಯು ಸ್ತ್ರೀಯರ ಜೀವನದ ಮೇಲೆ ಬೀರುತ್ತಿರುವ ಪರಿಣಾಮದ ಬಗ್ಗೆ ವಿಸ್ತೃತವಾದ ಚರ್ಚೆ ಕಡಿಮೆಯೆಂದೇ ಹೇಳಬಹುದು.

ಅಭಿವೃದ್ಧಿಯ ಪರಿಕಲ್ಪನೆಯು ಹಲವಾರು ರೀತಿಯ ಹೋರಾಟಗಳಿಗೆ ದಾರಿ ಮಾಡಿಕೊಟ್ಟಿದೆ. ಸ್ಥಳೀಯ ಮಟ್ಟದಲ್ಲಿ, ಭೂಮಿ, ನೀರು, ಕಾಡಿಗಾಗಿ ಇಂತಹ ಹೋರಾಟಗಳು ನಡೆದಿವೆ. ಈ ರೀತಿಯ ಪ್ರತಿಭಟನೆಗೆ ಮುಖ್ಯ ಕಾರಣ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಒತ್ತಡದಿಂದ ರೂಪಿತವಾಗುವ ಸರ್ಕಾರದ ಯೋಜನೆಗಳು. ಸ್ತ್ರೀಯರು ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೂ, ತೀರಾ ಇತ್ತೀಚಿಗಷ್ಟೇ ಅಭಿವೃದ್ಧಿಯ ಮಾದರಿಗಳು ಸ್ತ್ರೀಯರ ಬದುಕಿನ ಮೇಲೆ ಉಂಟಾಗುತ್ತಿರುವ ಪರಿಣಾಮವನ್ನು ಗುರುತಿಸಲಾಗುತ್ತಿದೆ. ಸ್ತ್ರೀಯರನ್ನು ಗಣನೆಗೆ ತೆಗೆದುಕೊಳ್ಳುವ ಯೋಜನಾ ನೀತಿಗಳೂ ಸಹ ಮಹಿಳೆಯರ ಅಗತ್ಯ, ಅಸ್ತಿತ್ವ, ಕುಟುಂಬ ಹಾಗೂ ಜನಾಂಗಗಳಲ್ಲಿ ಅವಳ ಸ್ಥಾನಮಾನದ ಬಗ್ಗೆ ಸರಿಯಾದ ತಿಳುವಳಿಕೆಯ ಕೊರತೆಯಿಂದ ಕೂಡಿದೆ.

ಬ್ರಿಟೀಷರಿಂದ ನಮ್ಮ ದೇಶ ಬಿಡುಗಡೆಯನ್ನು ಪಡೆದಿದ್ದರೂ, 'ರಾಜ್ಯ' ಪರಿಕಲ್ಪನೆಯಲ್ಲಿ ಯಾವುದೇ ರೀತಿಯ ಮೂಲಭೂತವಾದ ಬದಲಾವಣೆ ಆಗಲಿಲ್ಲ. ಊಳಿಗ ಮಾನ್ಯ ಪಳಯುಳಿಕೆಗಳೊಂದಿಗೆ ಮೇಲ್ಜಾತಿಯ ಜಮೀಂದಾರರು, ಕೈಗಾರಿಕೋದ್ಯಮಿಗಳು, ರಾಜಕಾರಣಿಗಳು, ನೌಕರಶಾಹಿ ಎಲ್ಲರೂ ಸಂಘಟಿತವಾದ ವಾತಾವರಣವನ್ನು ಸ್ವಾತಂತ್ರ್ಯಾ ನಂತರ ಕಾಣಬಹುದು.

ಅಭಿವೃದ್ಧಿಯ ಹಿನ್ನಲೆಯಲ್ಲಿ ನಡೆಯುತ್ತಿರುವ ಸ್ಥಳಾಂತರದ ಪರಿಣಾಮ, ಆದಿವಾಸಿ, ದಲಿತರ, ಸಣ್ಣ ರೈತರ ಮೇಲೆ ಬಹುಮುಖ್ಯವಾದ ಪರಿಣಾಮವನ್ನು ಬೀರುತ್ತದೆ. ಇವರು ಎಲ್ಲ ರೀತಿಯ ಶೋಷಣೆಗೆ ಒಳಗಾಗುತ್ತಾರೆ. ಸರ್ಕಾರ ಅಳವಡಿಸಲು ಪ್ರಯತ್ನಿಸುತ್ತಿರುವ ಅಭಿವೃದ್ಧಿ ಮಾದರಿಯು ಈ ಜನಾಂಗಗಳ ಮೇಲೆ ನಡೆಯುತ್ತಿರುವ ಶೋಷಣೆಯನ್ನು ತೀವ್ರಗೊಳಿಸುತ್ತದೆ. ಪ್ರಮುಖವಾಗಿ ಮಹಿಳೆಯರು ಹೆಚ್ಚು ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾರೆ. ಅಭಿವೃದ್ಧಿಯೆಂಬ ಚದುರಂಗದಾಟದಲ್ಲಿ ಸ್ತ್ರೀಯರು ಕೇವಲ ಆಟಿಕೆಗಳಾಗಿದ್ದಾರೆ.

ಜಬುವಾ ಮದ್ಯಪ್ರದೇಶದ ದಟ್ಟವಾದ ಅರಣ್ಯದಿಂದ ಕೂಡಿದ ಪ್ರದೇಶ. 25 ವರ್ಷಗಳ ಹಿಂದಿನ ವಾತಾವರಣ ಇಂದು ಸಂಪೂರ್ಣವಾಗಿ ಬದಲಾಗಿದೆ. ಸುತ್ತಮುತ್ತಲಿನ ಕೈಗಾರಿಕೆಗಳ ಪರಿಣಾಮವಾಗಿ ಜಬುವಾ ಕಾಡು ಕರಗ ತೊಡಗಿತು. ಬಹುಪಾಲು ಆದಿವಾಸಿಗಳು ಕಾಡನ್ನು ಅವಲಂಬಿಸಿ ತಮ್ಮ ಜೀವನವನ್ನು ನಡೆಸುತ್ತಿದ್ದರು. ಕಾಡು ಮಾಯವಾಗುತ್ತಿದ್ದ ಹಾಗೆ ಆದಿವಾಸಿಗಳು ಅತಂತ್ರ ಸ್ಥಿತಿಯಲ್ಲಿ ಬದುಕುವ ಅನಿವಾರ್ಯ ಸ್ಥಿತಿಯನ್ನು ತಲುಪಿದ್ದಾರೆ.

ಕೈಗಾರಿಕೆಗಳು, ಶಕ್ತಿ ಸ್ಥಾವರಗಳು, ಪೇಪರ್ ಕಾರ್ಖಾನೆಗಳು, ಗಣಿಗಳು, ರಾಷ್ಟ್ರೀಯ ಅಭಿವೃದ್ಧಿಯ ಸಂಕೇತಗಳೆನಿಸಿಕೊಳ್ಳುತ್ತಿವೆ. ಕಾಡಿನ ನಾಶದ ಪರಿಣಾಮವಾಗಿ, ಮಳೆ, ಬೆಳೆ ಹಾಗೂ ಭೂಮಿ ಸಂಬಂಧಗಳಲ್ಲಿ ಹಲವಾರು ಮೂಲಭೂತವಾದ ಬದಲಾವಣೆಯಾಗಿರುವುದನ್ನು ನಾವು ಕಾಣಬಹುದು. ಈ ಕಾರಣದಿಂದಾಗಿ ಜನರ ಜೀವನದ ಮಟ್ಟವೂ ಕುಸಿಯುತ್ತಿರುವುದು ಗಣನೀಯ ಅಂಶವಾಗಿದೆ.

ಆದಿವಾಸಿಗಳಿಗೂ ಹಾಗೂ ಕಾಡಿಗೂ ಒಂದು ಅಂತರ್ಗತವಾದ ಸಂಬಂಧವಿದೆ. ಕಾಡಿನ ನಾಶವೆಂದರೆ, ಆದಿವಾಸಿಗಳ ಮೂಲಭೂತವಾದ ಬದುಕುವ ಹಕ್ಕನ್ನು ಕಿತ್ತುಕೊಂಡಂತೆ. ಬದುಕಲು ದಾರಿ ಕಾಣದ ಆದಿವಾಸಿಗಳು ನಗರ ಪಟ್ಟಣಗಳನ್ನು ಅರಸಿ ಸ್ಥಳಾಂತರಗೊಳ್ಳಬೇಕಾಗುತ್ತದೆ. ಜಬುವಾ ಆದಿವಾಸಿ ಜನರು ಗುಜರಾತಿನ ಪಟ್ಟಣಗಳಿಗೆ ವಲಸೆ ಹೋಗುವುದು ಅನಿವಾರ್ಯವಾಗಿದೆ.

ಈ ಅನಿವಾರ್ಯ 'ವಲಸೆ'ಯಿಂದಾಗಿ ಸಮಾಜವೇ ಒಂದು ವಿಚಿತ್ರವಾದ ಬದಲಾವಣೆಯನ್ನು ಎದುರಿಸಬೇಕಾಗುತ್ತದೆ. ಜಾತಿಯ ಸೋಂಕಿನಿಂದ ಕೂಡಿದ ನಾಗರೀಕತೆ, ಆರ್ಥಿಕ ಅನಿಶ್ಚಿಯತೆ, ಸಾಮಾಜಿಕ ದ್ವಂದ್ವಗಳು, ಮುಂತಾದ ಸಮಸ್ಯೆಗಳಿಂದ ಆದಿವಾಸಿ ಜನರು ಅಶಕ್ತರಾಗಿ ನರಳಬೇಕಾಗುತ್ತದೆ. ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲಾಗದೇ ತತ್ತರಿಸುತ್ತಿದ್ದಾರೆ.

ಇದರ ಪರಿಣಾಮ ಸ್ತ್ರೀಯರ ಮೇಲೆ ತೀವ್ರಗತಿಯಲ್ಲಿ ಕಂಡುಬರುತ್ತಿದೆ. ವರ್ಗ, ಜಾತಿ, ಲಿಂಗ, ತಾರತಮ್ಯದ ಅತಿರೇಕದ ಅಮಾನುಷ ಅನುಭವಗಳನ್ನು ಸ್ತ್ರೀಯರು ನೇರವಾಗಿ ಅನುಭವಿಸಬೇಕಾಗುತ್ತದೆ. ಒಡೆದು ಹೋದ ಕೌಟುಂಬಿಕ ಪರಿಸರ, ಹಾಗೂ ಒಂದು ಜನಾಂಗದ ಬೆಂಬಲವಿಲ್ಲದೆ, ಹೆಂಗಸರು ಏಕಾಂಗಿಯಾಗಿ ಹೋರಾಡಬೇಕಾಗುತ್ತದೆ.

ಸಮಾಜ ಆದಿವಾಸಿ ಹೆಂಗಸರನ್ನು 'ಲೈಂಗಿಕವಾಗಿ ಮುಕ್ತತೆ'ಯನ್ನು ಆಚರಿಸುತ್ತಾರೆಂದು ಭಾವಿಸುತ್ತದೆ. ಸಮಾಜದ ಮುಖ್ಯವಾಹಿನಿಯ ವಿಶೇಷವಾಗಿ ಪುರುಷರು, ಆದಿವಾಸಿ ಹೆಂಗಸರನ್ನು ಭೋಗಿಸಲು ಇರುವವರೆಂದೇ ಭಾವಿಸುತ್ತಾರೆ. ಆದಿವಾಸಿ ಹೆಂಗಸರ ಮುಕ್ತ ಲೈಂಗಿಕತೆಯಿಂದಾಗಿ, ಆದಿವಾಸಿ ಸ್ತ್ರೀಯರು ಅತ್ಯಾಚಾರ ಹಾಗು ಇತರ ಲೈಂಗಿಕ ಕಿರುಕುಳವನ್ನು ಸಹ ಸಂತೋಷಿಸುತ್ತಾರೆಂದು ಭಾವಿಸುತ್ತಾರೆ. ವಲಸೆ ಬಂದ ಬಹುಪಾಲು ಆದಿವಾಸಿಗಳು ಕಟ್ಟಡದ ಕೆಲಸಗಳಲ್ಲಿ ತೊಡಗುವುದರಿಂದ, ಸ್ತ್ರೀಯರ ಮೇಲೆ ನಡೆಯುವ ಲೈಂಗಿಕ ಹಿಂಸೆಯ ಪ್ರಮಾಣವೂ ಅಧಿಕವಾಗಿದೆ ಎಂಬುದು ಅಂಕಿ ಅಂಶಗಳಿಂದ ಸಾಬೀತಾಗಿದೆ. ಆದಿವಾಸಿ ಸಮಾಜದಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಇರುವ ಸಮಾನತೆಯ ಅಂಶವನ್ನೂ ಗುರುತಿಸುವಲ್ಲಿ ನಾಗರೀಕವೆಂದನಿಸಿಕೊಂಡ ಸಮಾಜ ಸೋತಿದೆ. ಲೈಂಗಿಕತೆಯ ಮುಕ್ತತೆಯ ನೆಪದಲ್ಲಿ ಆದಿವಾಸಿ ಸ್ತ್ರೀಯರನ್ನು ಭೋಗದ ವಸ್ತುವೆಂಬುದನ್ನು ನ್ಯಾಯಸಮ್ಮತಗೊಳಿಸಲು ಪ್ರಯತ್ನಿಸುತ್ತದೆ.

ಸಮಾನವಾದ ಕೆಲಸಕ್ಕೆ ಸ್ತ್ರೀಯರಿಗೆ ಕಡಿಮೆ ವೇತನವನ್ನು ನೀಡಲಾಗುತ್ತದೆ. ಪುರುಷರಷ್ಟೇ ಪ್ರಮಾಣದ ಕೆಲಸ ಮಾಡುತ್ತಾ, ಕಡಿಮೆ ವೇತನವನ್ನು ಪಡೆದು ಹೆಂಗಸರು ಹಾಗೂ ಮಕ್ಕಳು ಹಲವಾರು ರೀತಿಯ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಆದಿವಾಸಿ ಸ್ತ್ರೀಯರು ಜನಾಂಗದ ಒಳಗಡೆ ಹಾಗೂ ಹೊರಗೆ ಎರಡೂ ಹಂತದಲ್ಲಿ ತುಳಿತಕ್ಕೆ ಒಳಗಾಗುತ್ತಾರೆ. ಅರ್ಥಿಕವಾಗಿ, ಸಾಮಾಜಿಕವಾಗಿ ನಗರ ವಾತಾವರಣ ಆದಿವಾಸಿಗಳ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ನಗರ ವಾತಾವರಣಕ್ಕೆ ಹೊಂದಿಕೊಳ್ಳಲಾಗದ ಆದಿವಾಸಿಗಳು ಅನಿವಾರ್ಯವಾಗಿ ಶೋಷಣೆಗೆ ಒಳಗಾಗಬೇಕಾಗುತ್ತದೆ.

ಹಳ್ಳಿಗಳಲ್ಲಿ ಅಷ್ಟು ಬಿಗಿಯಾಗಿ ಕಾಣದ ಪಿತೃಪ್ರಧಾನ ಸಂಬಂಧಗಳು ನಗರ ವಾತಾವರಣದಲ್ಲಿ ಹೆಚ್ಚು ಬಿಗಿಗೊಳ್ಳುತ್ತವೆ.

ಗಂಡಸರು ನಗರಗಳಿಗೆ ವಲಸೆ ಹೋದಾಗ ಆದಿವಾಸಿ ಹೆಂಗಸರು ಸಂಪೂರ್ಣವಾಗಿ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಇತರ ಆದಿವಾಸಿಗಳ ನೆರವು, ಸಹಕಾರವಿದ್ದರೂ, ಸ್ತ್ರೀಯರು ಕೃಷಿ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ಒಬ್ಬಂಟಿಯಾದ ಆದಿವಾಸಿ ಹೆಂಗಸು ಪುರುಷರಿಂದ ಲೈಂಗಿಕ ಹಿಂಸೆಗೊಳಗಾಗುವ ಭಯದಿಂದಲೇ ಬದುಕ ಬೇಕಾಗುತ್ತದೆ.

ಆದಿವಾಸಿ ಕುಟುಂಬದ ಗಂಡಸರು ವಲಸೆ ಹೋಗುವುದರಿಂದ ಕುಟುಂಬದ ದೈನಂದಿನ ಜೀವನದಲ್ಲಿ ಉಂಟಾಗುವ ಏರುಪೇರು ವಲಸೆಯ ಸಮಸ್ಯೆಯಷ್ಟೇ ಗಂಭೀರವಾದುದು. ವಲಸೆ ಹೋದ ಪುರುಷರು ತಮ್ಮ ಗೊಂದಲಗಳನ್ನು, ಹೊಸ ರೀತಿಯ ಕಾಯಿಲೆಗಳನ್ನು ವಾಪಸ್ಸು ತರುತ್ತಾರೆ.

ಅಭಿವೃದ್ಧಿಯೆಂದರೆ ಅಸಮಾನತೆಯನ್ನು ಬಿತ್ತುವ ಒಂದು ತಂತ್ರ. ಒಂದು ಪ್ರದೇಶದ, ಒಂದು ಜನಾಂಗದ ಪ್ರಾಕೃತಿಕ ಸಂಪನ್ಮೂಲಗಳನ್ನು ಇನ್ನೊಂದು ಪ್ರದೇಶ ಅಥವಾ ಜನಾಂಗ ಕಿತ್ತುಕೊಳ್ಳುವುದು. ಆದಿವಾಸಿ ಜನಾಂಗದ ಉಸಿರಾದ ಕಾಡು ಇನ್ನೊಬ್ಬನ ಅಭಿವೃದ್ಧಿಯ ಮಾನದಂಡದ ಮಾದರಿಯಾಗುತ್ತದೆ. ಇದಕ್ಕೆ ರಾಜಕೀಯ ಹಾಗೂ ಸಾಮಾಜಿಕ ಕುಮ್ಮಕ್ಕು ಇರುವುದರಿಂದಲೇ ಇದು ರಾಷ್ಟ್ರೀಯ ಅಭಿವೃದ್ಧಿ ಮಾದರಿಯೆಂಬ ಭ್ರಮೆಯನ್ನು ಬಿತ್ತಲಾಗುತ್ತದೆ.

ಸರ್ಕಾರ ಕೈಗಾರಿಕೆಗಳಿಗೆ ಆಧ್ಯತೆಯನ್ನು ನೀಡುತ್ತಿದೆ. ಸಹಜವಾಗಿಯೇ ಆದಿವಾಸಿಗಳು ಇತರ ಅಲ್ಪ ಸಂಖ್ಯಾತರು ಅಲಕ್ಷ್ಯಗೆ ತುತ್ತಾಗುತ್ತಾರೆ. ಇವರು ಶಾಲೆ, ಆರೋಗ್ಯ ಕೇಂದ್ರ, ರಸ್ತೆ, ಮುಂತಾದ ಅಭಿವೃದ್ಧಿಗಳಿಂದ ವಂಚಿತರಾಗುತ್ತಾರೆ. ನಗರ ಪ್ರದೇಶಗಳಿಗೆ ನೀಡುವ ಆಧ್ಯತೆಯನ್ನು ಹಳ್ಳಿಗಳಿಗೆ ನೀಡಲಾಗುತ್ತಿಲ್ಲ. ಹಳ್ಳಿಗಳಲ್ಲಿನ (ಹಾಗೂ ಕಾಡಿನ) ಸಕಲ ಸಂಪನ್ಮೂಲಗಳನ್ನು ಲೂಟಿ ಹೊಡೆದು ಅವುಗಳನ್ನು ನಗರ ಪ್ರದೇಶಗಳಲ್ಲಿ ಉಪಯೋಗಿಸಲಾಗುತ್ತಿದೆ. ಕಾಡಿನ ನಾಶದೊಂದಿಗೆ ಆದಿವಾಸಿ ಜನರು ಆಶಕ್ತರಾಗುತ್ತಿರುವುದರ ಜೊತೆಗೆ ಸಮಗ್ರತೆಯನ್ನು ಕಳೆದುಕೊಳ್ಳುತ್ತಿದ್ದಾರೆ.

ದೊಡ್ಡ ದೊಡ್ಡ ಅಣೆಕಟ್ಟುಗಳು, ಶಕ್ತಿ ಸ್ಥಾವರಗಳು, ಗಣಿಗಳನ್ನು ಕಟ್ಟುವ ಪ್ರಶ್ನೆ ಬಂದಾಗಲೆಲ್ಲಾ ರಾಷ್ಟ್ರೀಯ ಹಿತಾಸಕ್ತಿಯು ಬಹುಮುಖ್ಯ ಪ್ರಶ್ನೆಯಾಗಿ ಬಿಡುತ್ತದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಬೇಕಾದರೆ, ಜನರ ಹಿತಾಸಕ್ತಿಗೆ ಧಕ್ಕೆಯಾದರೂ ಕೆಲವು ಅಂಶಗಳನ್ನ ತ್ಯಜಿಸಬೇಕಾಗುತ್ತದೆಯೆಂದು ವಾದಿಸಲಾಗುತ್ತದೆ. ರಾಷ್ಟ್ರೀಯ ಹಿತಾಸಕ್ತಿ ಎನ್ನುವುದರ ಜೊತೆಗೆ ರಾಷ್ಟ್ರೀಯ ನಷ್ಟದ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಕಾಡಿನ ನಾಶ, ನೀರಿನ ಕೊರತೆ, ಭೂಮಿಯ ಫಲವತ್ತತೆಯು ಕಡಿಮೆಯಾಗುವುದು ಬರಗಾಲ ಅನಾವೃಷ್ಟಿ ಮುಂತಾದವುಗಳ ಕಡೆಗೂ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ.

ಇದಕ್ಕೆ ಸರ್ದಾರ್ ಸರೋವರ್ ಪ್ರೊಜೆಕ್ಟ್ ಉತ್ತಮ ನಿದರ್ಶನ. ಇಲ್ಲಿಂದ ಸ್ಥಳಾಂತರಗೊಂಡು ಬೇರೆ ಪ್ರದೇಶದಲ್ಲಿ ಹೋಗಿ ವಾಸಿಸುತ್ತಿರುವ ಸ್ತ್ರೀಯರ ಅನುಭವ ನರಕ ಸದೃಶ್ಯ. ಬೇರೆ ಸ್ಥಳದಲ್ಲಿ ಹೋಗಿ ವಾಸಿಸುವುದೆಂದರೆ, ತಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಬಿಟ್ಟು ಅಪರಿಚಿತ ವಾತಾವರಣದಲ್ಲಿ ಬದುಕುವುದು. ಜನಾಂಗೀಯ ಬೆಂಬಲವನ್ನು ಕಳೆದುಕೊಳ್ಳುವುದು ಅನಿವಾರ್ಯವಾಗುತ್ತದೆ.

ಸರ್ದಾರ್ ಸರೋವರ್‌ನಿಂದ ಸ್ಥಳಾಂತರಗೊಂಡ ಕುಟುಂಬಗಳು ಒಂದು ಕಡೆ ವಾಸಿಸಲು ಸಾಧ್ಯವಾಗದೇ ಚದುರಿ ಹೋಗಿದೆ. ಒಂದು ಜನಾಂಗದೊಳಗಡೆ ನೆರವು ನೀಡುವ ವ್ಯವಸ್ಥೆ ಹಾಗೂ ಸಾಮಾಜಿಕ ಸಂಬಂಧಗಳನ್ನು ರೂಪಿಸುವವರು ಬಹುಮಟ್ಟಿಗೆ ಹೆಂಗಸರು. ಇತರೆ ಜನಾಂಗಗಳಲ್ಲಿ ಹೆಚ್ಚಾಗಿ ಕಂಡುಬರದ ಸಮುದಾಯಿಕ ಸಂಬಂಧಗಳು ಆದಿವಾಸಿ ಸಮಾಜದಲ್ಲಿ ಕಂಡುಬರುತ್ತಿವೆ. ಮದುವೆ, ಕೌಟುಂಬಿಕ ವ್ಯಾಜ್ಯಗಳು, ಹಬ್ಬ ಹರಿದಿನಗಳು, ಒಟ್ಟಿಗೆ ಕೆಲಸ ಮಾಡುವ ಸಂದರ್ಭಗಳು ಮರೆಯಾಗುತ್ತಿರುವುದರಿಂದ ಸ್ತ್ರೀಯರು ಹೆಚ್ಚು ದುರ್ಬಲರಾಗುತ್ತಿದ್ದಾರೆ.

ಸ್ಥಳಾಂತರಗೊಂಡ ಪ್ರಯುಕ್ತ ಸ್ತ್ರೀಯರು ತಮ್ಮ ತವರು ಮನೆಗಳಿಂದ ದೂರವಾಗುತ್ತಿದ್ದಾರೆ. ಸ್ಥಳಾಂತರಗೊಳ್ಳುವ ಮೊದಲು ತವರು ಮನೆ ಹತ್ತಿರವೇ ಇದ್ದುದರಿಂದ ಹೋಗಿ ಬರುವುದು ಕಷ್ಟವಾಗುತ್ತಿರಲಿಲ್ಲ. ಆದರೆ, ದೂರ ಹಾಗೂ ಖರ್ಚು ಸಹ ಹೆಚ್ಚಾದುದರಿಂದ ಸ್ತ್ರೀಯರು ತವರು ಮನೆಗೆ ಹೋಗುವುದು ಸಹ ಅಸಾಧ್ಯವಾಗಿದೆ. ತವರು ಮನೆಗಳು ಹತ್ತಿರವಾಗಿದ್ದಾಗ, ಕೌಟುಂಬಿಕ ಜಗಳಗಳನ್ನು ಪರಿಹರಿಸಿಕೊಳ್ಳುವುದು ಸುಲಭವಾಗುತ್ತಿತ್ತು. ಸ್ಥಳಾಂತರದ ಪರಿಣಾಮವಾಗಿ ಇಂತಹ ಸಮಸ್ಯೆಗಳನ್ನು ಸ್ತ್ರೀಯರು ಒಬ್ಬಂಟಿಯಾಗಿ ಎದುರಿಸಬೇಕಾಗುತ್ತದೆ. ಕೌಟುಂಬಿಕ ಕಲಹಗಳಲ್ಲಿ ಸ್ತ್ರೀಯರು ಸಂಪೂರ್ಣವಾಗಿ ಅಸಹಾಯಕ ಪರಿಸ್ಥಿತಿಯನ್ನು ತಲುಪುತ್ತಿದ್ದಾರೆ. ಸ್ಥಳಾಂತರಗೊಂಡ ಪ್ರದೇಶಗಳಲ್ಲಿ ವೈವಾಹಿಕ ಸಂಬಂಧಗಳು ಹೆಚ್ಚು ಸಂಕೀರ್ಣತೆಗೆ ಒಳಗಾಗುತ್ತಿವೆ. ಇದು ಬಹುಪಾಲು ಸ್ತ್ರೀಯರಿಗೆ ಅನಾನುಕೂಲತೆಯನ್ನು ಉಂಟು ಮಾಡುತ್ತಿವೆ. ಸ್ತ್ರೀಯರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಆದಿವಾಸಿ ಪುರುಷರು ನಾಗರೀಕವೆಂದುಕೊಂಡ ಸಮಾಜದ ಅನುಕರಣೆಯನ್ನು ಮಾಡುವುದರಿಂದ ಸ್ತ್ರೀಯರನ್ನು ಹೆಚ್ಚು ಹೆಚ್ಚು ನಿಯಂತ್ರಿಸಲು ಪ್ರಯತ್ನಿಸುತ್ತಾರೆ. ಆದಿವಾಸಿ ಜನಾಗಂದ ಸಂಸ್ಕೃತಿಯೇ ವಿನಾಶದ ಅಂಚಿನಲ್ಲಿರುವುದರಿಂದ ಜೊತೆಗೆ ಅನುಕರಣೆಯಿಂದಾಗಿ ಸ್ತ್ರೀಯರ ಬಗೆಗಿನ ಧೋರಣೆಯು ಬದಲಾಗುತ್ತಿದೆ.

ಸ್ಥಳಾಂತರಗೊಂಡ ಕುಟುಂಬಗಳಲ್ಲಿ ಸ್ತ್ರೀಯರ ಚಲನ ವಲನದ ಮೇಲೆ ನಿರ್ಬಂದವನ್ನು ಹೇರಲಾಗುತ್ತಿದೆ. ಮೊದಲು ಕಡಿಮೆ ಇದ್ದ ನಿರ್ಬಂಧ ಹಾಗೂ ನಿಯಂತ್ರಣಗಳು ಸ್ಥಳಾಂತರಗೊಂಡ ನಂತರ ತೀವ್ರವಾಗುತ್ತದೆ. ಕಾಡಿನಲ್ಲಿ ನಿರ್ಭಯವಾಗಿ, ನಿರಾಂತಕವಾಗಿ ಓಡಾಡಿಕೊಂಡಿದ್ದ ಸ್ತ್ರೀಯರು ಇಂದು ನಗರ ಪ್ರದೇಶಗಳಲ್ಲಿ ಭಯದಿಂದ, ಸೀಮಿತ ಪ್ರದೇಶಗಳಲ್ಲಿ ಓಡಾಡಿಕೊಂಡಿರಬೇಕಾಗುತ್ತದೆ.

ಸರ್ದಾರ್ ಸರೋವರದಿಂದ ನೀರು ತರುವುದು, ಕಾಡಿನಿಂದ ಕಟ್ಟಿಗೆ ತರುವುದು, ಮೇವನ್ನು ಹುಡುಕಿಕೊಂಡು ಹೋಗುವುದು, ಮುಂತಾದ ಕೆಲಸಗಳಿಂದಾಗಿ ಸ್ತ್ರೀಯರು ಕಣಿವೆಯ ಸುತ್ತಮುತ್ತ ಸ್ವಚ್ಛಂಧವಾಗಿ, ನಿರ್ಭಯವಾಗಿ, ಓಡಾಡುತ್ತಿದ್ದರಿಂದ ತಮ್ಮದೆಂಬ ಭಾವನೆಯನ್ನು ಬೆಳೆಸಿಕೊಂಡಿದ್ದರು. ಆದರೆ ಇಂದು ಸ್ತ್ರೀಯರು ಬದುಕು ಸಂಕೀರ್ಣವಾಗಿದೆ. ಮೊದಲು ಅವರು ಮಾಡುವ ಕೆಲಸವು ಅವರದೇ ಆದ ಒಂದು ಪ್ರತ್ಯೇಕ ಕ್ಷಣಗಳನ್ನು ಕಳೆಯಲು ಪೂರಕವಾಗಿರುತ್ತಿದ್ದವು.

ಸ್ಥಳಾಂತರಗೊಂಡ ಮಹಿಳೆಯರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಲವಾರು ಅವಕಾಶಗಳಿಂದ ವಂಚಿತರಾಗಿದ್ದಾರೆ. ಸ್ತ್ರೀಯರು ಹೂವು, ಎಲೆ, ಗಿಡಮೂಲಿಕೆಗಳು, ಹಣ್ಣು ಮುಂತಾದವುಗಳಿಂದ ಅಲ್ಪಸ್ವಲ್ಪ ಹಣಕಾಸು ಸಂಪಾದಿಸುತ್ತಿದ್ದರು. ಸ್ಥಳಾಂತರಗೊಂಡ ಪ್ರದೇಶಗಳಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರೂ, ಅದು ಸಹ ಸಂಕೀರ್ಣ ಸ್ಥಿತಿಯನ್ನು ತಲುಪಿದೆ. ರಾಸಾಯನಿಕ ಗೊಬ್ಬರಗಳ ಉಪಯೋಗ, ಬಂಡವಾಳದ ಅಗತ್ಯ ಮುಂತಾದವು ಸ್ತ್ರೀಯರನ್ನು ವ್ಯವಸಾಯ ಕ್ಷೇತ್ರದಿಂದ ದೂರ ಮಾಡುತ್ತಿದೆ. ಮಾರುಕಟ್ಟೆಗೆ ಸಂಬಂಧಪಟ್ಟ ಕೆಲಸಗಳನ್ನು ಗಂಡಸರೇ ಸಂಪೂರ್ಣವಾಗಿ ನಿರ್ವಹಿಸುತ್ತಿದ್ದಾರೆ. ಅಪರಿಚಿತ ಪ್ರದೇಶದ ಸಂಸ್ಕೃತಿ, ಲೈಂಗಿಕ ಹಿಂಸೆ, ಇನ್ನಿತರ ಕಾರಣಗಳಿಂದಾಗಿ ಆದಿವಾಸಿ ಸ್ತ್ರೀಯರ ಜೀವನ ದುರ್ಬರವಾಗಿದೆ. ಒಂದು ಜನಾಂಗ ತನ್ನನ್ನು ಅರ್ಥೈಸಿಕೊಳ್ಳುವುದು ಹಾಗೂ ಪುನರ್‌ರಚಿಸಿಕೊಳ್ಳುವುದನ್ನು ಸ್ತ್ರೀಯರ ನಿಯಂತ್ರಣದ ಮೂಲಕವೇ ಮಾಡುತ್ತದೆ.

ಒಂದು ಜನಾಂಗದ ಸಂಸ್ಕೃತಿಯ ನಾಶ ಹಾಗೂ ಬೆಂಬಲಿತ ರಚನೆಯ ಕುಸಿತ ಇವು ಜನಾಂಗದ ಅಸ್ಥಿತ್ವವನ್ನು ಸಂಕ್ರಮಣ ಸ್ಥಿತಿಗೆ ದೂಡುತ್ತವೆ. ಅಭದ್ರತೆಯೇ ಈ ಜನಾಂಗದ ಉಸಿರಾಟವಾಗುತ್ತದೆ. ಆರ್ಥಿಕ, ರಾಜಕೀಯ ಸಾಂಸ್ಕೃತಿಕ ನೆಲೆಗಳನ್ನು ಕಳೆದುಕೊಂಡ ಜನಾಂಗ ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದು ಸಾಧ್ಯವಾಗದೇ ವಿಚಿತ್ರವಾದ ಗೊಂದಲದಲ್ಲಿ ಮುಳುಗುತ್ತದೆ. ಕಾಡಿನ ಬಗೆಗಿರುವ ಜ್ಞಾನ, ಪರಿಣಿತಿ, ಸ್ಥಳಾಂತರಗೊಂಡ ಪ್ರದೇಶಗಳಲ್ಲಿ ಉಪಯೋಗಕ್ಕೆ ಬರದವುಗಳಾಗುತ್ತವೆ. ಒಂದು ಪರಂಪರೆಯಿಂದ ಬಂದ ತಿಳುವಳಿಕೆ ಜ್ಞಾನ, ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುವುದಿಲ್ಲ. ಸರ್ದಾರ ಸರೋವರ ಪ್ರಾಜೆಕ್ಟ್ ಸ್ಥಳಾಂತರ ಸಮಸ್ಯೆಗಳು ಚರ್ಚಿತವಾಗಿಲ್ಲವೆಂದೇ ಹೇಳಬಹುದು.

ಅಭಿವೃದ್ಧಿಯ ಇನ್ನೊಂದು ಮುಖವನ್ನು ನಗರ ಪ್ರದೇಶದ ಕೊಳಚೆಗೇರಿಗಳು ಎತ್ತಿ ತೋರಿಸುತ್ತವೆ. ಬಹುಪಾಲು ದಲಿತರಿಂದಲೇ ಕೂಡಿದ ಕೊಳಚೆಗೇರಿಗಳು ನಾವು ಅಳವಡಿಸಿಕೊಂಡ ಅಭಿವೃದ್ಧಿ ಮಾದರಿಯ ಪರಿಣಾಮವಾಗಿದೆ. ಬರಗಾಲ, ಕಾಡಿನ ನಾಶದಿಂದಾಗುವ

ತೊಂದರೆ, ಬದುಕುವ ಮಾರ್ಗಗಳನ್ನು ಕಳೆದುಕೊಂಡಾಗ, ಸಂಪ್ರದಾಯಿಕ ವೃತ್ತಿಯಿಂದ ಜೀವನವನ್ನು ನಡೆಸಲು ಅಸಾಧ್ಯವಾದಾಗ ಜನರು ಕೊಳಚೆ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುತ್ತಾರೆ. ಹಳ್ಳಿಗಳಲ್ಲಿ ಆರ್ಥಿಕ ಬದಲಾವಣೆಯಾದಾಗ ಮೊದಲು ನೆಲೆ ಕಳೆದುಕೊಳ್ಳುವವರು ದಲಿತರು. ಶತಮಾನಗಳಿಂದ ದಲಿತರು ಶೋಷಣೆಗೆ ಒಳಗಾಗಿದ್ದಾರೆ. ನಾಗರೀಕ ಸಮಾಜ ಆದಿವಾಸಿ ಜನರನ್ನೂ 'ಅನಾಗರೀಕ' ಪಶು ಸಮಾನರು ಎಂದೇ ಭಾವಿಸುತ್ತದೆ. ದಲಿತರಿಗೆ, ಸಮಾಜ ಯಾವುದೇ ಅಧಿಕಾರವನ್ನು ನೀಡುವುದಿಲ್ಲ. ಈ ತಾರತಮ್ಯವನ್ನು ಆಚರಿಸಲು ತನ್ನ ಸಮ್ಮತಿಯ ಮುದ್ರೆಯನ್ನು ಒತ್ತಿದೆ. ಹಳ್ಳಿಗಳಲ್ಲಿ ಯಾವುದಾದರೂ ಬದಲಾವಣೆಯಾದಾಗ, ಸಮಾಜ ದಲಿತರನ್ನು ಹೊರಹಾಕಲು ನೋಡುತ್ತದೆ. ಯಾವುದೇ ಆಯ್ಕೆಯಿಲ್ಲದ ದಲಿತರು ಪಟ್ಟಣಗಳಿಗೆ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ.

ಪಟ್ಟಣದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಸದಾ ಅಭದ್ರತೆಯ ಭಾವನೆಯಿಂದಲೇ ಅವರು ಬದುಕಬೇಕಾಗುತ್ತದೆ. ಅಲ್ಪಸ್ವಲ್ಪ ಉಳಿಸಿ ಕಟ್ಟಿಕೊಂಡ ಪುಟ್ಟ ಗೂಡು ಶಾಶ್ವತವಲ್ಲ. ಅಧಿಕಾರಿಗಳು ಯಾವುದೇ ಮುನ್ಸೂಚನೆ ನೀಡದೇ ಅವರನ್ನು ಎತ್ತಂಗಡಿ ಮಾಡಿಸುತ್ತಾರೆ.. 'ಅಭಿವೃದ್ಧಿ' ಪರಿಕಲ್ಪನೆ ಈ ಜನರಿಗೆ ಅನ್ವಯವಾಗುವುದೇ ಇಲ್ಲ. ನಗರ ಪ್ರದೇಶಗಳಲ್ಲಿ ಜಾತಿ ತಾರತಮ್ಯ ಅಷ್ಟಾಗಿ, ನೇರವಾಗಿ ಕಂಡು ಬರದಿದ್ದರೂ, ವರ್ಗ ತಾರತಮ್ಯವನ್ನು ನೇರವಾಗಿ ಈ ಜನರು ಅನುಭವಿಸುತ್ತಾರೆ. ಸಂಪನ್ಮೂಲಗಳ ವಿಂಗಡಣೆಯಲ್ಲಿ ಹೆಚ್ಚು ಪಾಲನ್ನು ಮೇಲುವರ್ಗದ ಜನರು ಪಡೆಯುತ್ತಾರೆ. ಕೊಳಚೆ ಪ್ರದೇಶಗಳನ್ನು ನಗರಗಳ ಕಪ್ಪುಚುಕ್ಕೆಗಳೆಂದೇ ನೋಡಲಾಗುತ್ತದೆ. ಈ ಎಲ್ಲ ಸಂಕೀರ್ಣತೆಯ ಹೊರೆಯನ್ನು ಅಂತಿಮವಾಗಿ ಸ್ತ್ರೀಯರೇ ಹೊರಬೇಕಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಸ್ತ್ರೀಯರು ಕೌಟುಂಬಿಕ ಹಿಂಸೆಗೆ ಬಲಿಯಾಗುತ್ತಾರೆ. ಲೈಂಗಿಕ ಕಿರುಕುಳ ಅವರ ಬದುಕಿನ ಒಂದು ಭಾಗವಾಗಿದೆ.

ಯಾವುದೇ ಬಗೆಯ ಸ್ಥಳಾಂತರವನ್ನು ಪುರುಷರು, ಮಹಿಳೆಯರು ವಿರೋಧಿಸುತ್ತಾ ಬಂದಿದ್ದಾರೆ. ಸ್ತ್ರೀಯರು ತಮ್ಮ ಸಂಪ್ರದಾಯಿಕ ಪಾತ್ರವನ್ನು ಬಿಟ್ಟು ಇಂತಹ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಮಹಿಳೆಯರು ಸಾರ್ವಜನಿಕರ ಕ್ಷೇತ್ರಕ್ಕೆ ಪ್ರವೇಶಿಸುವುದರ ಮೂಲಕ ರಾಜ್ಯ, ಜನಾಂಗ ಹಾಗೂ ಕುಟುಂಬಗಳು ರೂಢಿಸಿಕೊಂಡು ಬಂದ ತಾರತಮ್ಯ ನೀತಿಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಸ್ತ್ರೀಯರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡುದರ ಪ್ರಯುಕ್ತ ಅವರ ರಾಜಕೀಯ ಪ್ರಜ್ಞೆಯು ಬೆಳೆದಿರುವುದರಿಂದ, ಲಿಂಗ ಅಸಮಾನತೆಯಲ್ಲೂ ಹಲವಾರು ರೀತಿಯ ಬದಲಾವಣೆಯಾಗುತ್ತಿದೆ. ಅವರ ಖಾಸಗೀ ಜೀವನಕ್ಕೂ ಹಾಗೂ ಸಾರ್ವಜನಿಕ ಜೀವನಕ್ಕೂ ಇರುವ ಸಂಬಂಧವನ್ನು ಗಮನಿಸಲು ಸಾಧ್ಯವಾಗಿದೆ. ಜಗತ್ತಿನ ಬಗ್ಗೆ ಇರುವ ತಿಳುವಳಿಕೆ ವಿಸ್ತೃತವಾಗುವುದರ ಜೊತೆಗೆ, ಅವರಲ್ಲಿ ವಿಶ್ವಾಸ ತುಂಬಿ ನಾಯಕತ್ವ ಗುಣಗಳ ಬೆಳವಣಿಗೆಗೆ ಪೂರಕವಾಗಿದೆ.

ಸಾರ್ವಜನಿಕ ಸಭೆ ಹಾಗೂ ಮೆರವಣಿಗೆಗಳಲ್ಲಿ ಸ್ತ್ರೀಯರನ್ನು ಮುಂಚೂಣಿಯಲ್ಲಿ ನಿಲ್ಲಿಸುವುದ ಸರ್ವೇ ಸಾಮಾನ್ಯ ಸಂಗತಿ. ಹಿಂಸೆ ಅಥವಾ ಹೆಚ್ಚು ಪೊಲೀಸ್ ಪಡೆಗಳಿರುವ ಕಡೆ ಮಹಿಳೆಯರ ಸಂಖ್ಯೆಯನ್ನು ರಕ್ಷಣೆಗಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಆದರೆ ಇದಕ್ಕೆ ಅಪವಾದವೆಂಬಂತೆ ಸ್ತ್ರೀಯರ ಸಂಪೂರ್ಣವಾಗಿ ಪ್ರತಿಭಟನೆಯನ್ನು ನಡೆಸಿದ ನಿದರ್ಶನಗಳೂ ಇವೆ. ಜನರ ಹೋರಾಟಗಳಲ್ಲಿ ಸ್ತ್ರೀಯರ ಸ್ಥಾನಮಾನವೇನು? ಎಂಬ ಪ್ರಶ್ನೆಯು ಉಂಟಾಗುತ್ತದೆ. ಸ್ತ್ರೀಯರು ನಾಯಕತ್ವ ವಹಿಸಿಕೊಳ್ಳಲು ಪೂರಕ ವಾತಾವರಣ ಉಂಟು ಮಾಡುವುದು, ಹೋರಾಟಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮಾಡುವ, ಸ್ತ್ರೀಯರು ನಿರ್ಣಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆಯೆ? ಹೋರಾಟಗಳಲ್ಲಿ ಸ್ತ್ರೀಯರು ಬದ್ಧತೆಯಿಂದ ಭಾಗವಹಿಸುತ್ತಿರುವುದನ್ನು ನಾವು ನೋಡುತ್ತಿದ್ದರೂ, ನಾಯಕತ್ವ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಶ್ನೆ ಬಂದಾಗ ಸ್ತ್ರೀಯರನ್ನು ಅಲಕ್ಷಿಸಲಾಗುತ್ತಿದೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಸ್ತ್ರೀಯರು ಭಾಗವಹಿಸಬೇಕಾಗಿದ್ದರೂ, 'ಮನೆಯ ಜವಾಬ್ದಾರಿಗಳನ್ನು' ಮೂಲಭೂತವಾಗಿ ನಿರ್ವಹಿಸಬೇಕಾಗುತ್ತದೆ. ಹಾಗಾಗಿ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಒಂದು ಪಕ್ಷ ಸಭೆಗಳಲ್ಲಿ ಭಾಗವಹಿಸಿದರೂ, ಪುರುಷರಿಗೆ ಕಾಡದ ಸಮಯದ ಪ್ರಶ್ನೆ ಹೆಂಗಸರನ್ನು ಕಾಡುತ್ತದೆ. ನಾಯಕತ್ವ ಸ್ಥಾನವನ್ನು ಗಳಿಸಬೇಕಾದರೆ ಸ್ತ್ರೀಯರು ಹೆಚ್ಚು ಸಮಯವನ್ನು ಕಳೆಯಬೇಕಾಗುತ್ತದೆ. ಹೆಂಗಸರಿಗಿಂತ ಪುರುಷರೇ ಸಭೆಗಳಲ್ಲಿ ಸುಲಭವಾಗಿ ಭಾಗವಹಿಸಬಹುದೆಂಬ ಸರಳ ಸುಲಭ ಸೂತ್ರಕ್ಕೆ ಒಗ್ಗಿಕೊಳ್ಳಲಾಗುತ್ತಿದೆ. ಈ ಕಾರಣಗಳಿಂದಾಗಿಯೇ ಹೆಂಗಸರನ್ನು ಸಂಘಟಿಸುವುದು ಸುಲಭದ ಕೆಲಸವಲ್ಲ. ಇದು ಒಂದು ದೀರ್ಘಾವಧಿಯ ಪ್ರಕ್ರಿಯೆ. ಸಾರ್ವಜನಿಕ ಜೀವನ ಪುರುಷರಿಗೇ ಸೀಮಿತವೆಂದು ಭಾವಿಸಲಾಗಿದೆ. ಸ್ತ್ರೀಯರು ದ್ವಿತೀಯ ದರ್ಜೆಯ ಪಾತ್ರವನ್ನು ವಹಿಸುತ್ತಲೇ ಬಂದಿದ್ದಾರೆ.

ಸ್ತ್ರೀಯರು ತಮ್ಮನ್ನು ಹೋರಾಟಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನ ಪಟ್ಟಾಗಲು, ಹಲವಾರು ರೀತಿಯ ತೊಂದರೆಗಳನ್ನು ಎದುರಿಸಬೇಕಾಗಿದೆ. ಪೋಲೀಸರ ಹಿಂಸೆ, ದೌರ್ಜನ್ಯ, ಪೋಲೀಸರಿಂದ ಅತ್ಯಾಚಾರದ ಭಯ, ಗುಂಡಾಗಿರಿ ಮುಂತಾದವು ಸ್ತ್ರೀಯರನ್ನು ಕಾಡುವ ಭಯಗಳು.

ಒಂದು ಜನಾಂಗ ನಡೆಸುವ ಹೋರಾಟಗಳಲ್ಲಿ ಸ್ತ್ರೀಯರು ಭಾಗವಹಿಸುವುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಅವರ ಅಭಿಪ್ರಾಯಗಳನ್ನು ಅಲಕ್ಷಿಸಲಾಗುತ್ತದೆ. ಇಂತಹ ಹೋರಾಟಗಳಲ್ಲಿ ತೊಡಗಿಸಿಕೊಂಡ ಮಹಿಳೆಯರು ಕೌಟುಂಬಿಕ ಜೀವನದಲ್ಲಿ ಹಲವಾರು ರೀತಿಯ ರಿಸ್ಕ್‌ಗಳನ್ನು ತೆಗೆದುಕೊಂಡಿರುತ್ತಾರೆ. ಪುರುಷ ಪ್ರಾಧಾನ್ಯ ನಾಯಕತ್ವ ಹಾಗೂ ನಿರ್ಣಯಗಳ ಪ್ರಕ್ರಿಯೆ ಬಹಳಷ್ಟು ಸ್ತ್ರೀಯರಿಗೆ ಒಂದು ಅಡ್ಡ ಗೋಡೆಯಾಗುತ್ತದೆ. ಸ್ತ್ರೀಯರು ಇಂತಹ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಒಂದು ಗುಣಾತ್ಮಕ ಅಂಶ. ಆದರೆ ಅವರಿಗಾಗುವ ಅನುಭವಗಳು ಅವರನ್ನು ಹಿಂದಕ್ಕೆ ತಳ್ಳುವಂತಾಗಬಾರದು. ಅಭಿವೃದ್ಧಿಯು ಸ್ತ್ರೀಯರ ಹಿತಾಸಕ್ತಿಗೆ ವಿರುದ್ಧವಾಗಿದೆ. ಗಂಡು ಹೆಣ್ಣಿನ ನಡುವಿರುವ ಅಸಮಾನತೆ ಹಾಗೂ ಎಲ್ಲ ಅಧಿಕಾರ ಸಂಬಂಧಗಳು ಪುನರ್ ವ್ಯಾಖ್ಯಾನಗೊಳ್ಳಬೇಕಾಗಿದೆ ಎಂದು ಸ್ತ್ರೀವಾದ ಭಾವಿಸುತ್ತದೆ. ಈ ಪ್ರಕ್ರಿಯೆಯ ಮೂಲಕ ಸ್ತ್ರೀಯು ವ್ಯಕ್ತಿಗತ ನೆಲೆಯಲ್ಲಿ ಹಾಗೂ ಸಮುದಾಯಿಕ ನೆಲೆಯಲ್ಲಿ ತಮ್ಮ ದೃಷ್ಟಿಕೋನದ ಹರವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ಸ್ತ್ರೀವಾದಿ ಹೋರಾಟಗಳಿಗೂ ಹಾಗೂ ಜನಪರ ಹೋರಾಟಗಳ ನಡುವೆ ಒಂದು ಗಟ್ಟಿಯಾದ ತಾತ್ವಿಕ ಸಂಬಂಧ ಕಲ್ಪಿಸುವುದು ಅತ್ಯಗತ್ಯವಾಗಿದೆ. ಸ್ತ್ರೀ ಸಂಘಟನೆಗಳು ಇತರ ಚಳುವಳಿಗೆ ಬೆಂಬಲ ನೀಡುವುದರ ಜೊತೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಅತ್ಯಗತ್ಯವಾಗಿದೆ. ಇದಕ್ಕೆ ಪೂರಕವಾದ ಚರ್ಚೆ, ಸಂವಾದಗಳು ನಡೆಯುವುದೂ ಅತ್ಯಗತ್ಯವಾಗಿದೆ. ಸ್ತ್ರೀವಾದಿ ಸಂಘಟನೆಗಳು ಸಕ್ರಿಯ ಭಾಗವಹಿಸುವಿಕೆಯಿಂದಾಗಿ, ಇತರ ಚಳುವಳಿಗಳ ಸ್ವರೂಪವೂ ಬದಲಾಗುವ ಸಾಧ್ಯತೆಗಳಿವೆ.

●

ತಂದೆ ಆಸ್ತಿಗೆ ವಿವಾಹಿತ ಮಗಳೂ ಹಕ್ಕುದಾರಳು

ಮಗಳು ಮದುವೆಯಾಗಿದ್ದರೂ ಅವಿಭಕ್ತ ಹಿಂದೂ ಕುಟುಂಬದಲ್ಲಿ ತಂದೆಗೆ ಬಂದ ಆಸ್ತಿಯ ಭಾಗದಲ್ಲಿ ಪಾಲು ಪಡೆಯಲು ಅರ್ಹಳು ಎಂದು ಮುಂಬಯಿಯ ಹೈಕೋರ್ಟ್ ಒಂದು ಮಹತ್ವದ ತೀರ್ಪು ನೀಡಿದೆ.

ನ್ಯಾಯಾಧೀಶರುಗಳಾದ M.L. ಡುಡತ್ ಮತ್ತು A.S.U. ಮೂರ್ತಿ ಅವರು ಶ್ರೀಮತಿ ಉಷಾರಾಣಿ ನಾರಾಯಣ್ ಹಲ್ದನ್‌ಕರ್ ಅವರು ಹೂಡಿದ ದಾವಕ್ಕೆ, ಪುಣೆಯ ಕೋರ್ಟು ನೀಡಿದ ತೀರ್ಪಿಗೆ ವಿರುದ್ಧವಾಗಿ ತಮ್ಮ ನ್ಯಾಯ ತೀರ್ಪಿನಲ್ಲಿ ಮಗಳು ಮದುವೆಯಾದ ನಂತರ ತಾಯಿಮನೆ ಬಿಟ್ಟು ಗಂಡನ ಮನೆಯಲ್ಲಿ ನೆಲೆಸಿದ್ದರೂ ಹಿಂದೂ ಉತ್ತರಾಧಿಕಾರ ಕಾಯಿದೆಯ ಪ್ರಕಾರ ತಂದೆಯ ಆಸ್ತಿಯಲ್ಲಿ ಭಾಗ ಹೊಂದಲು ಅರ್ಹಳಾಗಿರುತ್ತಾಳೆ ಎಂದು ಹೇಳಿದ್ದಾರೆ.

ಶ್ರೀಮತಿ ಉಷಾರಾಣಿಯವರು ಏಪ್ರಿಲ್ 30, 1976ರಲ್ಲಿ ಒಡವೆ ಬಂಗಾರಗಳ ರೂಪದಲ್ಲಿ ತಮ್ಮ ಪಾಲನ್ನು ತೆಗೆದುಕೊಂಡಿರುವುದರಿಂದ ತಂದೆಯ ಚರಾಚರ ಆಸ್ತಿಯಲ್ಲಿ ಪಾಲು ಪಡೆಯಲು ಅರ್ಹಳಲ್ಲ ಮತ್ತು ತಾಯಿಯ ಮನೆಯಲ್ಲಿ ಅವಳ ಆಸ್ತಿ ಹಕ್ಕಿನ ಸ್ಥಾನ ಹೊಂದುವುದು ಸಾಧ್ಯವಿಲ್ಲವೆಂದು ಟ್ರಯಲ್ ಕೋರ್ಟ್ ಹೇಳಿತ್ತು.

ಆದರೆ ಆಗಸ್ಟ್ 23, 1991ರಲ್ಲಿ ಟ್ರಯಲ್ ಕೋರ್ಟ್ ನೀಡಿದ ಆದೇಶಕ್ಕೆ ವಿರುದ್ಧವಾಗಿ ಮುಂಬಯಿ ಹೈಕೋರ್ಟ್ ತೀರ್ಪು ನೀಡುತ್ತಾ "ಮಗಳ ಸ್ಥಾನ ತಾಯಿ ಮನೆಯಿಂದ ಗಂಡನ ಮನೆಗೆ ಸ್ಥಾನಾಂತರ ಹೊಂದಿದಾಕ್ಷಣ ಅದು ಅವಳ ಆಸ್ತಿ ಹಕ್ಕನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ" ಎಂದು ಹೇಳಿದೆ.

ಡಿಸೆಂಬರ್ 2, 1972ರಲ್ಲಿ ಅವಳ ತಂದೆ ತೀರಿಕೊಂಡಾಗಲೆ ಹಿಂದೂ ಕಾಯಿದೆ ಪ್ರಕಾರ ಅವಳು ತಂದೆಯ ಆಸ್ತಿಯಲ್ಲಿ ಭಾಗ ಕೇಳಲು ಮತ್ತು ಪಡೆಯಲು ಅರ್ಹಳಾಗಿದ್ದಳು. ಈಗ ಅವಳು ಮದುವೆಯಾಗಿದ್ದಾಳೆ ಅನ್ನುವ ಕಾರಣದಿಂದ ಅವಳ ಹಕ್ಕನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಕ್ಷಿದಾರರು ತಂದೆ ಸತ್ತಾಗ ಅಪ್ರಾಪ್ತವಯಸ್ಕಳಾಗಿದ್ದು ತಂದೆ ಸತ್ತ ಏಳು ತಿಂಗಳ ನಂತರ ಅಂದರೆ ಜುಲೈ 7, 1973ಕ್ಕೆ ವಯಸ್ಸಿಗೆ ಬಂದಿದ್ದಾಳೆ. ಲಿಮಿಟೇಷನ್ ಕಾಯಿದೆಯ ಸೆಕ್ಷನ್ 6, ವಯಸ್ಸಿಗೆ ಬರುವ ತನಕದ ಕಾಲವನ್ನು ಹೊರತು ಪಡಿಸುತ್ತದೆ, ಎಂಬ ಅಂಶವನ್ನು ಇಟ್ಟುಕೊಂಡು ಅವಳು ತನಗೆ ಹಕ್ಕು ಸಿಕ್ಕ ತಕ್ಷಣ ಅಂದರೆ ಮೆಜಾರಿಟಿಗೆ ಬಂದ ತಕ್ಷಣ ಕೇಳಬೇಕಿತ್ತು. ಎಷ್ಟೋ ಕಾಲದ ನಂತರ ಕೇಳುತ್ತಿರುವುದರಿಂದ ಇದನ್ನು ಕಾರಣವಾಗಿಟ್ಟುಕೊಂಡು ಅವಳ ತಂದೆ ಮನೆಯವರು ಭಾಗ ಕೊಡಲು ನಿರಾಕರಿಸುತ್ತಿದ್ದಾರೆ ಮತ್ತು ಕೊಡಲು ಸಾಧ್ಯವಿಲ್ಲ ಎಂದು ಟ್ರಯಲ್ ಕೋರ್ಟ್ ಹೇಳಿತ್ತು.

ಆದರೆ ಹೈಕೋರ್ಟ್ ಟ್ರಯಲ್ ಕೋರ್ಟಿನ ತೀರ್ಪು ಕಾನೂನಿಗೆ ಮತ್ತು ಕೇಸಿನ ವಾಸ್ತವ ವಿಷಯಗಳಿಗೆ ವಿರುದ್ಧವಾಗಿದೆ ಎಂದು ಹೇಳಿ ಅದಕ್ಕೆ ವಿರುದ್ಧವಾದ ತೀರ್ಪು ನೀಡಿದೆ.

(ಕೃಪೆ : ಟೈಮ್ಸ್ ಆಫ್ ಇಂಡಿಯಾ)

ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸಲು ಅತ್ಯಾಚಾರಕ್ಕೊಳಗಾದವರ ಸಾಕ್ಷಿ ಸಾಕು - ಹೈಕೋರ್ಟ್

ಅತ್ಯಾಚಾರಕ್ಕೊಳಗಾದ ವ್ಯಕ್ತಿಯ ಸಾಕ್ಷಿಯು ನಂಬಿಕೆಗೆ ಅರ್ಹವಾಗಿದ್ದು ಅದೊಂದೆ ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸಲು ಸಾಕು ಎಂದು ಕರ್ನಾಟಕದ ಹೈಕೋರ್ಟ್ ಇತ್ತೀಚೆಗೆ ಅತ್ಯಾಚಾರದ ಕೇಸಿಗೆ ಸಂಬಂಧಿಸಿದ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ತೀರ್ಪು ನೀಡಿರುವುದು ಮೈಕೆಲ್. ಎಫ್. ಸಲ್ಡಾನ್ ಮತ್ತು H. N. ನಾರಾಯಣ್ ಅವರ ನ್ಯಾಯ ಸಮಿತಿ. ಅಪರಾಧಿಗಳು ಮತ್ತು ವಕೀಲರುಗಳು ಸರಿಯಾದ ಸಾಕ್ಷಿ ಬೇಕು ಎಂದು ಹೇಳುತ್ತಾ ತಪ್ಪಿಸಿಕೊಳ್ಳದಂತೆ ಮತ್ತು ಅತ್ಯಾಚಾರಕ್ಕೊಳಗಾದ ವ್ಯಕ್ತಿ ಅತ್ಯಾಚಾರವನ್ನು ಸಾಬೀತು ಪಡಿಸುವಲ್ಲಿ ಮತ್ತೊಮ್ಮೆ ಹಿಂಸೆಗೆ ಒಳಗಾಗದಂತೆ ಈ ಸಮಿತಿಯು ಒಂದು ಮಹತ್ವದ ತೀರ್ಪು ನೀಡಿದೆ.

ಸಾಮಾನ್ಯವಾಗಿ ಅತ್ಯಾಚಾರದ ಕೇಸುಗಳಲ್ಲಿ ಅಪರಾಧಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗದಿರುವುದಕ್ಕೆ ತನಿಖಾ ಕಾರ್ಯದ ವಿಳಂಬವೇ ಮುಖ್ಯ ಕಾರಣವಾಗಿರುತ್ತದೆ. ಇದನ್ನರಿತ ನ್ಯಾಯಾಧೀಶರುಗಳು ತನಿಖಾ ಕಾರ್ಯವನ್ನು ಸ್ವತಃ ಕೈಗೊಂಡು ಪೊಲೀಸರ ಅಸಮರ್ಥತೆಯನ್ನು ಸಾಬೀತುಪಡಿಸಿ ಅವರ ತನಿಖಾ ಕಾರ್ಯ ವಿಳಂಬಕ್ಕೆ ಛೀಮಾರಿ ಹಾಕಿದ್ದಾರೆ. ಪೋಲೀಸರ ತನಿಖಾ ವಿಳಂಬವೇ ನ್ಯಾಯ ಮತ್ತು ವೈದ್ಯಕೀಯಕ್ಕೆ ಸಂಬಂಧಿಸಿದ ಸಾಕ್ಷಿಗಳನ್ನು ಹಾಳುಮಾಡುತ್ತದೆ ಮತ್ತು ಅಪರಾಧಿಗಳಿಗೆ ಹೆಚ್ಚು ಲಾಭದಾಯಕವಾಗಿ ಪರಿಣಮಿಸುತ್ತದೆ ಎಂದು ಕೋರ್ಟು ಆರೋಪಿಸಿದೆ.

ಈ ಅತ್ಯಾಚಾರದ ಕೇಸಿನಲ್ಲಿ ಅತ್ಯಾಚಾರಕ್ಕೊಳಗಾಗಿರುವುದು 10 ವರ್ಷದ ಹುಡುಗಿ. ಮೊದಲು ಹುಡುಗಿಯನ್ನು ಪರೀಕ್ಷಿಸಿ ಅತ್ಯಾಚಾರದ ಕೇಸ್ ಎಂದು ಪ್ರಮಾಣ ಪತ್ರ ನೀಡಿದ ಸರ್ಕಾರಿ ವೈದ್ಯರ ನಡತೆಯನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ, ಏಕೆಂದರೆ ಪೋಲೀಸರ ಪ್ರಕಾರ ಅದೇ ವೈದ್ಯ ಕೋರ್ಟಿನಲ್ಲಿ ಇದು ಅತ್ಯಾಚಾರದ ಕೇಸ್ ಅಲ್ಲ ಎಂದು ಸಾಕ್ಷಿ ನೀಡಿದ್ದಾರೆ.

"ಇಂತಹ ವೃತ್ತಿನಿರತ ವ್ಯಕ್ತಿಗಳು ಈ ರೀತಿಯ ಗಂಭೀರ ಕೇಸುಗಳಲ್ಲಿ ಸುಳ್ಳು ಸಾಕ್ಷಿ ನೀಡಿ ಅಪರಾಧಿಗಳು ತಪ್ಪಿಸಿಕೊಳ್ಳುವಂತೆ ಮಾಡುತ್ತಾರೆ ಅಲ್ಲದೆ ಅವರನ್ನು ಶಿಕ್ಷಿಸಲು ಬೇಕಾಗುವ ಸಾಕ್ಷಿಗಳನ್ನು ಸುಳ್ಳಾಗಿಸುವುದು ನಮ್ಮ ಒಂದು ದುರದೃಷ್ಟಕರ. ಇದರಿಂದ ಸಂಬಂಧಪಟ್ಟ ಅಧಿಕಾರಿಗಳು ತಾವು ನೀಡಿದ ಸಾಕ್ಷಿಗೆ ಸರಿಯಾದ ಕಾರಣ ನೀಡುವಂತೆ ಅವರ ಮೇಲೆ ಗಂಭೀರ ಕ್ರಮಕೈಗೊಳ್ಳಬೇಕು" ಎಂದು ಕೋರ್ಟ್ ಹೇಳಿದೆ.

"ಕೋರ್ಟ್ ಎಂದೂ ಕನಿಕರ ತೋರುವುದಿಲ್ಲ, ಅದರಲ್ಲೂ ಮಕ್ಕಳ ಮೇಲೆ ಮಾಡುವ ಅತ್ಯಾಚಾರ ಘೋರ ಅಪರಾಧಿಗಳಿಗೆ ದಯೆ ತೋರುವುದಿಲ್ಲ. ಅಂತಹ ಅಪರಾಧಿಗಳನ್ನು ನ್ಯಾಯಾಲಯಕ್ಕೆ ಕರೆ ತಂದು ನ್ಯಾಯ ಆಡಳಿತಕ್ಕೆ ಬೆಂಬಲ ನೀಡಬೇಕಾಗಿರುವಂತ ವೈದ್ಯಕೀಯ ಮತ್ತು ಇತರ ಅಧಿಕಾರಿಗಳು ಅಪರಾಧಿಗಳ ಜೊತೆ ಸೇರಿಕೊಂಡು ಸಾಕ್ಷಿಗಳನ್ನು ನಾಶ ಮಾಡುತ್ತಾರೆ. ಅಂತವರಿಗೆ ನ್ಯಾಯಾಲಯ ಕಠಿಣ ಶಿಕ್ಷೆ ನೀಡುತ್ತದೆ ಎಂದು ಹೈಕೋರ್ಟ್ ಹೇಳಿದೆ.

ಅತ್ಯಾಚಾರಕ್ಕೊಳಗಾದ ವ್ಯಕ್ತಿಯ ಬಟ್ಟೆಯಲ್ಲಿನ ಕಲೆ ಅಥವಾ ಇತರ ಪರೀಕ್ಷೆಗಳಂತ ಎರಡನೇ ಸಾಕ್ಷಿಗಳು ಇಲ್ಲದಿರುವುದರಿಂದ ವೈದ್ಯಕೀಯ ಸಾಕ್ಷಿಗಳು ಆಪಾದಿತನನ್ನ ಅತ್ಯಾಚಾರಿ ಎಂದು ಶಿಕ್ಷಿಸಲು ಸಹಾಯ ಮಾಡುವುದಿಲ್ಲ ಎಂದು ಅಪರಾಧಿಯ ವಕೀಲರು ವಾದ ಮಾಡಿದ್ದಾರೆ. ಆದುದರಿಂದ ನ್ಯಾಯ ಸಮಿತಿಯ ತನಿಖೆಯ ನೆಪದಲ್ಲಿ ಪೋಲೀಸರು ಸಾಕಷ್ಟು ಸಮಯ ಕಳೆದಿರುವುದನ್ನು ಮತ್ತು ಡಾಕ್ಟರ್ ಮೊದಲು ಈ ಕೇಸನ್ನು ಅತ್ಯಾಚಾರದ ಕೇಸ್ ಎಂದು ಪ್ರಮಾಣೀಕರಿಸಿರುವುದನ್ನು ಪ್ರಮುಖ ಅಂಶಗಳನ್ನಾಗಿ ತೆಗೆದುಕೊಂಡಿತು. ಎಲ್ಲಿ ಸಾಕ್ಷಿಗಳು ಸಂಪೂರ್ಣವಾಗಿ ನಂಬಿಕಾರ್ಹವಾಗಿರುತ್ತವೋ ಅಲ್ಲಿ ಅಪರಾಧಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಖಂಡಿತ ಸಾಧ್ಯ ಎಂದು ನ್ಯಾಯಾಧೀಶರುಗಳು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ಪೋಲೀಸ್ ಇಲಾಖೆಯವರು ದೂರನ್ನು ದಾಖಲು ಮಾಡಿಕೊಳ್ಳುವಲ್ಲಿ ನಿಧಾನ ಮಾಡಿದ್ದರೆ ಅದನ್ನು ನ್ಯಾಯ ನೀಡಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ಬೇಕಾಗುವಂತ ಗಂಭೀರ ವಿಷಯ ಎಂದು ಪರಿಗಣಿಸಬೇಕು ಎಂದು ಹೇಳಿ ಹೈಕೋರ್ಟ್ ಒಂದು ಮಹತ್ವದ ಹೆಜ್ಜೆಯನ್ನು ಮುಂದಿಟ್ಟಿದೆ.

(*ಆಧಾರ - Times of India*)

ಕೈಗಾ ಪ್ರದೇಶದಲ್ಲಿ ಮುಳುಗಡೆ - ಸ್ಥಳಾಂತರದ ಹಾವಳಿ

ವಿಷ್ಣು ಕಾಮತ್

ಸ್ವಾತಂತ್ರ್ಯಾನಂತರ ಭಾರತದ ನೆಹರೂ ಪ್ರಣೀತ ಅಭಿವೃದ್ಧಿ ಮಾದರಿಯಲ್ಲಿನ ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಭೂಸ್ವಾದೀನದಿಂದಾಗಿ ಐದು ಲಕ್ಷಕ್ಕೆ ಮಿಕ್ಕು ಜನರ ಸ್ಥಳಾಂತರವಾಗುತ್ತಿದೆ. (ಪಂಚವಾರ್ಷಿಕ ಯೋಜನೆಯೇತರ ಪ್ರಾಜೆಕ್ಟ್‌ಗಳು, ಭೂ ಬಳಕೆಯಲ್ಲಿನ ಬದಲಾವಣೆ, ನಗರಾಭಿವೃದ್ಧಿ ಮತ್ತು ಒಟ್ಟಾರೆ ಪರಿಸರದ ಅವನತಿ-ಮಾಲಿನ್ಯಗಳಿಂದುಂಟಾಗುವ ಸ್ಥಳಾಂತರ ಇಲ್ಲಿ ಸೇರಿಲ್ಲ). ಜಲ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಜನರ ಆವಾಸಗಳನ್ನು ನಾಶ ಮಾಡಿ ಸ್ಥಳಾಂತರಿಸುವ ಪ್ರಮುಖ ಮೂಲಗಳಾದರೂ, ಗಣಿಗಾರಿಕೆ, ಶಾಖೋತ್ಪನ್ನ ಮತ್ತು ಅಣುಶಕ್ತಿ ಸ್ಥಾವರಗಳು, ಕೈಗಾರಿಕಾ ಸಂಕೀರ್ಣಗಳು, ಮಿಲಿಟರಿ ಪ್ರತಿಷ್ಠಾನಗಳು, ಆಯುಧ ಪರೀಕ್ಷಣಾ ಸ್ಥಳಗಳು, ರಕ್ಷಿತ ಅರಣ್ಯ, ಅಭಯಾರಣ್ಯ, ರಾಷ್ಟ್ರೀಯ ವನಗಳ ವಿಸ್ತರಣೆ, ಲಾಭಕರ ತಾಂತ್ರಿಕತೆಗಳ ಮುಂದುವರೆದ ಬಳಕೆ ಇವೆಲ್ಲ ತೀವ್ರವಾದ ಸ್ಥಳಾಂತರಕ್ಕೆ ಕಾರಣಗಳಾಗಿವೆ. ಸ್ಥಳಾಂತರಗೊಂಡವರಿಗೆ ಸೂಕ್ತ ಪುನರ್ವಸತಿ ಒದಗಿಸುವುದು ಕಾನೂನಾದರೂ, 1989ರಲ್ಲಿ ಕಂಡುಬಂದ ಒಂದು ಅಂದಾಜಿನ ಪ್ರಕಾರ ಒಂದು ಕೋಟಿ ಹದಿನೈದು ಲಕ್ಷ ಜನ ಪುನರ್ವಸತಿಗೊಳ್ಳದೆ ಉಳಿದಿದ್ದರು! ಕಳೆದ ಎಂಟು ವರ್ಷಗಳಲ್ಲಿ ಇದನ್ನೆಷ್ಟು ಹೆಚ್ಚಿರಬಹುದೆಂದು ಊಹಿಸಬಹುದು!

ಜಾಗತೀಕರಣಕ್ಕೆ ಭಾರತ ತೆರೆದುಕೊಂಡ ನಂತರವಂತೂ ವಿದೇಶೀ ಬಂಡವಾಳಿಗರ ವಿವಿಧ ಹೂಡಿಕೆಗಳಿಗೆ ಈ ದೇಶದ ಅತಿ ಫಲವತ್ತಾದ ಭೂಮಿಯ ವಿಸ್ತಾರ ಭಾಗಗಳು ತುತ್ತಾಗುತ್ತಲೇ ಹೋಗುತ್ತಿರುವಾಗ ಸ್ಥಳಾಂತರಗೊಂಡವರ ವಿಹ್ವಲತೆ ಇಂದು ದೇಶದ ಅತ್ಯಂತ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಂಬಂಧದಲ್ಲಿ ಇದರ ಪರಿಣಾಮಗಳು ಊಹಿಸಲಸಾಧ್ಯ. ಈ ಹಿನ್ನೆಲೆಯಲ್ಲಿಯೇ, ಇದೇ ವರ್ಷ ಡಿಸಂಬರ್‌ನಲ್ಲಿ ರಾಂಚಿಯಲ್ಲಿ ನಡೆಯಲಿರುವ ೬ನೇ ಅಖಿಲ ಭಾರತ ಮಹಿಳಾ ಸಮಾವೇಶದಲ್ಲಿ ಸ್ಥಳಾಂತರದ ಸಮಸ್ಯೆಯನ್ನು ಮುಖ್ಯ ವಿಷಯವಾಗಿ ನಿಗದಿಪಡಿಸಲಾಗಿದೆ.

ಬೇರೆ ಅನೇಕ ರಾಜ್ಯಗಳಲ್ಲಿಯಂತೆ ಕರ್ನಾಟಕವೂ, ವಿವಿಧ ಅಭಿವೃದ್ಧಿ ಯೋಜನೆಗಳಡಿಯಲ್ಲಿ ತೀವ್ರ ಸ್ಥಳಾಂತರದ ಸಮಸ್ಯೆಗೆ ಘಕ್ಕಾದ ರಾಜ್ಯ. ಕರ್ನಾಟಕದಲ್ಲಿನ ಸ್ಥಳಾಂತರ ಸಂಬಂಧೀ ಸಮಸ್ಯೆಗಳ ಒಂದು ಒಟ್ಟು ಚಿತ್ರಣ ಪಡೆಯುವ ಮೂಲಕ ಮಹಿಳಾ ಸಮಾವೇಶದಲ್ಲಿ ಇಲ್ಲಿನ ಮಹಿಳೆಯರ ಸ್ಥಳಾಂತರ ಸಂಬಂಧೀ ಪ್ರಶ್ನೆಯನ್ನು ಹೆಚ್ಚು ಅಥೆಂಟಿಕ್ ಆಗಿ ಹಂಚಿಕೊಳ್ಳುವ ಸಣ್ಣ ಪ್ರಯತ್ನ ಮಾನಸದ್ದು. ಕೆಲವು ಅನುಭವಿಗರನ್ನು ಆಹ್ವಾನಿಸಿ ಚರ್ಚೆಯಲ್ಲಿ ತೊಡಗುವ ಮೂಲಕ ಈ ದಿಕ್ಕಿನಲ್ಲಿ ಸ್ಪಷ್ಟ ಹೆಜ್ಜೆ ಹಾಕಲು ಸಾಧ್ಯವೆಂದು ನಿರ್ಧರಿಸಿ ಕಾರ್ಯೋದ್ಯುಕ್ತರಾದ ಫಲವಾಗಿಯೇ ದಿ. 14.6.97ರಂದು ಶ್ರೀಯುತ ವಿಷ್ಣು ಕಾಮತರು ತಮ್ಮ ಅನುಭವ-ಚಿಂತನೆಗಳನ್ನು ಹಂಚಿಕೊಳ್ಳಲು ಸಾಧ್ಯವಾದದ್ದು.

ಕರ್ನಾಟಕದಲ್ಲಿ ಸ್ಥಳಾಂತರದ ಬಗ್ಗೆ ಒಂದು ಸಂಶೋಧನಾತ್ಮಕ ವಿಶ್ಲೇಷಣೆಯನ್ನು ಒದಗಿಸುವ ಉದ್ದೇಶವಿರದ ವಿಷ್ಣು ಕಾಮತರವರು, ಸ್ಥಳಾಂತರವೆನ್ನುವ ವಿನಾಶಕಾರೀ ಸಂಗತಿ ಕುಟುಂಬ ಮತ್ತು ಸಮುದಾಯಗಳ ಅತ್ಯಂತ ಸೂಕ್ಷ್ಮ, ಅರ್ಥಪೂರ್ಣ, ಜೀವ ಪ್ರೇರಕ ಒಳತಂತುಗಳನ್ನು ಕಡಿದು ನಾಶ ಮಾಡುತ್ತಾ "ಬಯಲಲ್ಲಿ ಬತ್ತಲೆ"ಯಾಗಿ ನಿಲ್ಲಿಸುವಂತಹ ಸ್ಥಿತಿಯನ್ನು ಆಪ್ತವಾಗಿ ಹಂಚಿಕೊಂಡರು. ಸಮಸ್ಯೆಯನ್ನು ಅತ್ಯಂತ ವಯಕ್ತಿಕ ನೆಲೆಯಿಂದಲೇ ಬಿಡಿಸಿಡ ಹೊರಟಿದ್ದು ಒಂದರ್ಥದಲ್ಲಿ ಸ್ತ್ರೀ ಸ್ವರೂಪಿಯೇ ಆಗಿತ್ತು. ಅವರಂದು ಹಂಚಿಕೊಂಡ ವಿಚಾರಗಳು ಮತ್ತು ಚರ್ಚೆಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಕರ್ನಾಟಕದಲ್ಲಿ ಮುಳುಗಡೆಯ ಸಮಸ್ಯೆ ಸಾಕಷ್ಟು ಪ್ರಭಲವಾಗಿದೆ. ಉತ್ತರ ಕನ್ನಡದಂತಹ ಒಂದೇ ಒಂದು ಜಿಲ್ಲೆ ತೆಗೆದುಕೊಂಡರೆ ಅಲ್ಲಿ ಸುಮಾರು ೧೩ ಅಣೆಕಟ್ಟುಗಳು ಈಗಾಗಲೇ ನಿರ್ಮಾಣಗೊಂಡಿವೆ. ಇಲ್ಲವೇ ನಿರ್ಮಾಣ ಹಂತದಲ್ಲಿವೆ. ಸದ್ಯಕ್ಕೆ ನಿರ್ಮಾಣ ಮುಗಿಯುತ್ತಿರುವಂತಹವೆಂದರೆ ಕದ್ರ, ಕೊಡಸಳ್ಳಿ, ಸೂಪ, ಕಾಳಿ - ಒಂದು, ಎರಡು ಮತ್ತು ಮೂರನೇ ಹಂತ ಮುಂತಾದವು. ಇನ್ನು ಬೇಡ್ತಿ ಮತ್ತು ಅಘುನಾಶಿನಿಗಳು ಪ್ರಪೋಸಲ್ ಹಂತದಲ್ಲಿವೆ. ಇದರಿಂದಾಗಿ ಜಿಲ್ಲೆಯ 10ರಿಂದ 15% ವಿಸ್ತಾರವೇ ಮುಳುಗಡೆ ಆಗುವ ಸಂದರ್ಭ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ, ಒಂದೇ ಪ್ರಾಜಕ್ಟ್‌ನಡಿ ತಾಲೂಕಿನ 10% ಭಾಗ ಮುಳುಗಡೆ ಆಗಿದೆ. ಈ ಜಿಲ್ಲೆಯಲ್ಲಂತೂ ಒಮ್ಮೆ ಮುಳುಗಡೆಯಿಂದ ಸ್ಥಳಾಂತರಗೊಂಡು ಬೇರೆಡೆ ಹೋದವರು ಮತ್ತೆ ಆ ಪ್ರದೇಶ ಮುಳುಗಡೆ ಆಗಿ ಒಂದೇ ಜೀವಮಾನದಲ್ಲಿ ಎರಡೆರಡು ಬಾರಿ ಸ್ಥಳಾಂತರಗೊಂಡ ಉದಾಹರಣೆಗಳಿವೆ. ಕರ್ನಾಟಕದಲ್ಲಿ ಮುಳುಗಡೆ ಸಮಸ್ಯೆಯ ಬಗ್ಗೆ ವಿಜಯ ಪರಾಂಜಪೆ (ಬೇಡ್ತಿ ಕುರಿತು) ಮತ್ತು ಪ್ರೊ. ಡಿ. ಕೆ. ಸುಬ್ರಹ್ಮಣ್ಯಂ ಮುಂತಾದವರು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದಾರೆ. ನಮ್ಮ ಗುಂಪು 'ಅವಿನಾಶ'ವಾಗಲೀ ಅಥವಾ ಸ್ವತಃ ನಾನಾಗಲೀ ಇದರ

ಬಗ್ಗೆ ವೈಜ್ಞಾನಿಕವಾದ ಮಾಹಿತಿ ಸಂಗ್ರಹಣೆ-ವಿಶ್ಲೇಷಣೆ ಮಾಡಿಲ್ಲವಾದರೂ, ಕಳೆದ 6-7 ತಿಂಗಳುಗಳಿಂದ ಕೈಗಾ ಅಣುಸ್ಥಾವರದ ಸುತ್ತಮುತ್ತ ಪ್ರದೇಶದಲ್ಲಿ ಆರೋಗ್ಯ ಸಮೀಕ್ಷೆ ಮಾಡುವಾಗ ಮುಳುಗಡೆ ಮತ್ತು ಸ್ಥಳಾಂತರದ ಸಮಸ್ಯೆಗಳನ್ನ ಬಹಳ ಹತ್ತಿರದಿಂದ ಕಂಡದ್ದನ್ನು ಅನುಭವಾತ್ಮಕವಾಗಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ನಾವು ಮಾಡುತ್ತಿರುವ ಆರೋಗ್ಯ ಸಮೀಕ್ಷೆಗೂ ಮುಳುಗಡೆ-ಸ್ಥಳಾಂತರದ ಸಮಸ್ಯೆಗೂ ನೇರ ಸಂಬಂಧವಿರುವಂತೆ ತೋರದಿರಬಹುದು. ಆದರೆ ಇದನ್ನು ನಾವು ಕೈಗೊಳ್ಳಲು ಮುಖ್ಯ ಕಾರಣವಿದೆ. ಅದರ ಹಿನ್ನಲೆ ಹೀಗಿದೆ. ರಾಜಾಸ್ತಾನದ ರಾಹತ್‌ಬಾಟದಲ್ಲಿ ಭಾರತ ಸರ್ಕಾರದ ವತಿಯಿಂದ 1972ರ ವೇಳೆಗೆ ರಾಜಾಸ್ತಾನ್ ಅಟಾಮಿಕ್ ಪವರ್ ಸ್ಟೇಷನ್ ನಿರ್ಮಾಣಗೊಂಡಿತು. 72ರಿಂದ 91ರವರೆಗೆ 19 ವರ್ಷಗಳ ಕಾಲ ಇದು ಕಾರ್ಯಾಚರಣೆಯಲ್ಲಿದ್ದ ನಂತರ ಅದರ ಸುತ್ತಮುತ್ತಲಿರುವ ಜನರ ಆರೋಗ್ಯ ತುಂಬಾ ದುಸ್ಥಿತಿಯಲ್ಲಿರುವ ಬಗ್ಗೆ ಕೂಗು ಕೇಳಿ ಬಂತು, ಸಾರ್ವಜನಿಕ ಆರೋಗ್ಯದ ಬಗ್ಗೆ ಸಮೀಕ್ಷೆಯೂ ಆಯಿತು. ಸಮೀಕ್ಷೆಯಿಂದ ತಿಳಿದು ಬಂದದ್ದೆಂದರೆ ವಿಶೇಷವಾಗಿ ಗಂಟು-ಗ್ರಂಥಿಗಳು, ಚರ್ಮದ ಕ್ಯಾನ್ಸರ್, ಚರ್ಮದ ಉರಿಊತ, ಪುರುಷರಲ್ಲಿ ಫಲಹೀನತೆ, ಅಂಗವೂನ ಮಕ್ಕಳ ಹುಟ್ಟು, ಗರ್ಭಪಾತ ಇವೆಲ್ಲ ಸಾಮಾನ್ಯ ಜನರಲ್ಲಿಯಕ್ಕಿಂತ 300ರಿಂದ 400% ಈ ಜನರಲ್ಲಿ ಜಾಸ್ತಿ ಇತ್ತು! ಈ ಸರ್ವೆ ನಡೆದು ಏಳು ವರ್ಷದ ನಂತರ ಇನ್ನೂ 14 ಸಣ್ಣ ಮಕ್ಕಳು ಸತ್ತಿವೆ. ಇದನ್ನು ಅಂಕಿಕ ವಿಶ್ಲೇಷಣೆಗೆ ಒಡ್ಡಿದರೆ ಮಕ್ಕಳ ಸಾವು-ಇನ್ನೂ 300% ಹೆಚ್ಚಿಗೆ ಹೋಗುತ್ತದೆ. ಈ ವಾಸ್ತವವನ್ನು ನಾವು ಸರ್ಕಾರ ಮತ್ತು ಅಟಾಮಿಕ್ ಎನರ್ಜಿ ರೆಗ್ಯುಲೇಟರಿ ಬೋರ್ಡ್‌ನ ಗಮನಕ್ಕೆ ತಂದಾಗ ಅವರು ಪ್ರತಿಕ್ರಿಯಿಸಿದ ರೀತಿ ನಮ್ಮನ್ನು ಬೆಚ್ಚಿಸಿತು. ಇಲ್ಲಿನ ಜನರು ಅತ್ಯಂತ ಬಡವರು, ಕೊಳಕರು, ನೈರ್ಮಲ್ಯದ ಬಗ್ಗೆ ಕಿಂಚಿತ್ ಜ್ಞಾನ ಇಲ್ಲದವರು. ಆದ್ದರಿಂದ ಅವರ ಆರೋಗ್ಯ ಸ್ಥಿತಿ ಅಣುಸ್ಥಾವರ ಬರುವ ಮುಂಚೆಯೂ ಹೀಗೇ ಇತ್ತು ಎಂದು ಕೊಕ್ಕೆ ಹಾಕಿ ಸಮೀಕ್ಷೆಯಿಂದ ಹೊರಬಂದ ಮಾಹಿತಿಯನ್ನು ತಳ್ಳಿ ಹಾಕಲಾಯಿತು. ಇದರಿಂದ ಅಸಹಾಯಕರಂತಾದ ನಾವು ಕೈಗಾ ಅಣುಸ್ಥಾವರ ಶುರು ಆಗುವ ಮುಂಚೆಯೇ ಜನರ ಆರೋಗ್ಯ ಹೇಗಿತ್ತು ಎಂದು ಪ್ರಚುರ ಪಡಿಸುವ ಸಮೀಕ್ಷೆ ಮಾಡಿ, ಅದರ ವೈಜ್ಞಾನಿಕವಾದ ವಿಶ್ಲೇಷಣೆಯನ್ನು ಪ್ರಕಟಿಸಬೇಕು ಎಂದು ತೀರ್ಮಾನಿಸಿದೆವು. ಕೈಗಾದಿಂದ ಹತ್ತು ಕಿಲೋ ಮೀಟರ್ ಪರಿಧಿಯಲ್ಲಿರೋ ಎಲ್ಲ ಮನೆಗೆ ಹೋಗಿ ಸಮೀಕ್ಷೆ ಮುಗಿಸಿದ್ದೇವೆ. ನಾವು ಹೋದದ್ದು ಆರೋಗ್ಯ ಸಮೀಕ್ಷೆಗಾದರೂ ನಮಗೆ ಎದುರಾದದ್ದು ತೀವ್ರವಾದ ಮುಳುಗಡೆ ಮತ್ತು ಸ್ಥಳಾಂತರದ ಸಮಸ್ಯೆ.

ಕೈಗಾ ಅಣುಸ್ಥಾವರದ ಸುತ್ತಮುತ್ತ 3-4 ಅಣೆಕಟ್ಟುಗಳು ನಿರ್ಮಾಣವಾಗ್ತಾ ಇದೆ. ಅಣು ಸ್ಥಾವರಕ್ಕೆ ನೀರು ಒದಗಿಸೋದಕ್ಕಾಗಿಯೇ ಕಟ್ತಾ ಇರೋದು ಕದ್ರ ಅಣೆಕಟ್ಟು. ಕದ್ರ ಮತ್ತು ಕೊಡಸಳ್ಳಿ ಅಣೆಕಟ್ಟುಗಳ ನಿರ್ಮಾಣ ಸಂಪೂರ್ಣ ಮುಗಿದಿದೆ. ಒಟ್ಟಾರೆ ಅಣುಸ್ಥಾವರ ಮತ್ತು ಅಣೆಕಟ್ಟುಗಳಿಂದ ಸ್ಥಳಾಂತರದ ಸಮಸ್ಯೆಗೆ ಎದುರಾಗಿರುವ ಸುತ್ತಮುತ್ತಲ ಕುಟುಂಬಗಳ ವಿಹ್ವಲಕಾರೀ ಅನುಭವಗಳಲ್ಲಿ ಕೆಲವನ್ನ ನಾನಿಲ್ಲಿ ಹಂಚಿಕೊಳ್ಳುತ್ತೇವೆ.

ಒಂದು ಒಟ್ಟು ಕುಟುಂಬ, ವೃದ್ಧ ತಂದೆತಾಯಿಗಳು ಒಬ್ಬನೇ ಮಗ, ಸೊಸೆ ಮತ್ತು ಮೂರು ಮೊಮ್ಮಕ್ಕಳು. ಕೈಗಾ ಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡು ಚೆನ್ನಾಗೇ ಜೀವನ ನಡೆಸ್ತಾ ಇದ್ರು. ಅಣುಸ್ಥಾವರದಿಂದ ಅವರ ಭೂಮಿ acquire ಆಯ್ತು. ಅಲ್ಲಿನ ಜನರಿಗೆ ಒಟ್ಟು ಕೂಡಿ ಹೋರಾಟ ಮಾಡುವ ಪ್ರಜ್ಞೆ ಸಾಕಷ್ಟಿದ್ದರೂ ಅದೆಲ್ಲ ಕಿರಿಕಿರಿ ಯಾಕೆಂದು ಈ ಕುಟುಂಬ ಪರಿಹಾರ ತಗೆದುಕೊಂಡು ಕೈಗಾದಿಂದ 10 ಕಿ.ಮೀ. ದೂರದಲ್ಲಿರೋ ಕುರುಮೀಪೇಟೆಗೆ ಬಂದು ಬಿಟ್ರು. ಸ್ಥಳಾಂತರಗೊಂಡ ಪ್ರತೀ ಕುಟುಂಬಕ್ಕೂ ಸ್ಥಾವರದಲ್ಲಿ ಒಂದೊಂದು ನೌಕರಿ ಕೊಟ್ಟಿದ್ದಾರೆ. ಈ ಮಗನಿಗೂ ಅಲ್ಲಿ ನೌಕರಿ ಸಿಕ್ತು, ಮತ್ತೆ ಅಲ್ಲಿ ಕೆಲ್ಸ ಮಾಡೋ ಎಲ್ಲ ಕರ್ಮಚಾರಿಗಳಿಗೆ ಮಲ್ಲಪುರ ಎನ್ನುವ 3 ಕಿ.ಮೀ. ದೂರದ ಜಾಗದಲ್ಲಿ ಕ್ವಾಟರ್ಸ್ ಕಟ್ಟಿಕೊಟ್ಟಿದ್ದಾರೆ. ಕೆಲಸ ಸಿಕ್ಕ ತಕ್ಷಣ ಈ ಮಗ ಹೆಂಡತಿ ಮಕ್ಕಳನ್ನ ಕರೆದುಕೊಂಡು ಕ್ವಾಟರ್ಸ್‌ಗೆ ಹೋಗಿಬಿಟ್ಟ. ವೃದ್ಧ ದಂಪತಿಗಳು ಮಾತ್ರ ಕುರುಮೀ ಪೇಟೇಲಿ ಉಳಿದರು. ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡಿಕೊಂಡು ಸಂತೃಪ್ತಿಯಿಂದ ಬದುಕುತ್ತಿದ್ದ ಕುಟುಂಬ ಆಸ್ತಿ ಕಳಕೊಂಡು ತಮ್ಮದೇ ಉದ್ದೇಶ ಇಲ್ಲದೇನೇ ವಿಭಾಗಗೊಂಡಿರುವಂತಹ ಸ್ಥಿತಿ ಇದು. ಸರಕಾರೀ ನೌಕರಿ ಪಡೆದ ಮಗನ ಸಾಮಾಜಿಕ-ಆರ್ಥಿಕ ವರ್ಗವೇ ಬೇರೆಯಾಗಿಬಿಟ್ಟಿದೆ. ವೃದ್ಧ ತಂದೆ ತಾಯಿಗಳನ್ನ ಅವನು ನೋಡಲು ಬರಲಾರ. ಎಲ್ಲವನ್ನೂ ಕಳಕೊಂಡ ವೃದ್ಧರು ಸ್ಥಳಾಂತರದಿಂದುಂಟಾದ ವಿಹ್ವಲತೆಯಲ್ಲಿ ಕಾಲ ದೂಡುತ್ತಿದ್ದಾರೆ.

ಕೈಗಾ ಪಕ್ಕದಲ್ಲೊಂದು ಊರಿದೆ. ಅಲ್ಲಿ ನಾಲ್ಕನೇ ತರಗತಿಯವರೆಗೆ ಶಾಲೆ ಇದೆ. ಅಲ್ಲಿ ಒಂದು ಕುಟುಂಬದಲ್ಲಿ ತಾಯಿ ಹತ್ತನೇ ತರಗತಿವರೆಗೆ ಓದಿದ್ದಾಳೆ (ತನ್ನ ತವರೂರಲ್ಲಿ). ಈ ಊರಿನ 4ನೇ ತರಗತಿಯವರೆಗಿನ ಶಾಲೆಯನ್ನ 7ನೇ ತರಗತಿವರೆಗೆ ವಿಸ್ತರಿಸಬೇಕೆಂದು ತೀರ್ಮಾನವಾಗಿತ್ತು. ಅಷ್ಟೊತ್ತಿಗೆ ಈ ಹಳ್ಳಿ ಮುಳುಗಡೆ ಆಗುವ ಸ್ಥಿತಿ ಬಂತು. ಇದು ಇಳಿಜಾರಿನಲ್ಲಿರೋ ಹಳ್ಳಿ. ಹಳ್ಳಿಯ ಕೆಳಭಾಗ ಜಲಾಶಯದ ಮಟ್ಟಕ್ಕಿಂತ ಕೆಳಗೆ ಬರುವುದರಿಂದ ಹಳ್ಳಿಯ 40% ಭಾಗ ಮುಳುಗುತ್ತದೆ. ಅಂದರೆ ಆ ಹಳ್ಳಿಯ 40% ಜನಸಂಖ್ಯೆ ಸ್ಥಳಾಂತರವಾಗುತ್ತೆ. ಮೊದಲೇ

ಚಿಕ್ಕ ಹಳ್ಳಿ, ಇನ್ನೂ ಚಿಕ್ಕದಾಗುತ್ತದೆಂದು ಶಾಲೆಯನ್ನ ವಿಸ್ತರಿಸುವ ವಿಚಾರವನ್ನ ಕೈಬಿಡಲಾಯಿತು. ಇಂತಹ ಸ್ಥಿತಿಯಲ್ಲಿ ಆ ತಾಯಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ತವರು ಮನೆಗೆ ಮುಂದಿನ ಓದಿಗೆ ಕಳಿಸಿದ್ದಾಳೆ. ಅಂಗವೂನ ಇರುವ ಮಗನನ್ನ ತಮ್ಮಲ್ಲಿಯೇ ಉಳಿಸಿಕೊಂಡಿದ್ದಾಳೆ. ಅವನ ಓದು ನಾಲ್ಕಕ್ಕೇ ನಿಂತುಬಿಟ್ಟಿದೆ. ದೀರ್ಘಕಾಲಿಕದಲ್ಲಿ ಇಲ್ಲಿ ಕಂಡುಬರುವದೆಂದರೆ ಜನರ ವಿದ್ಯಾಭ್ಯಾಸದ ಮಟ್ಟ ಜನಾಂಗದಿಂದ ಜನಾಂಗಕ್ಕೆ ಹೆಚ್ಚಾಗುವ ಬದಲು ಕುಗ್ಗುತ್ತಿದೆ! ಇದೊಂದೇ ಅಲ್ಲ, ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಬರುವದಿತ್ತು, ಪಶು ವೈದ್ಯ ಕೇಂದ್ರ ಬರುವುದಿತ್ತು. ಭಾಗಶಃ ಮುಳುಗಡೆಯ ಕಾರಣಕ್ಕೆ ಅದ್ಯಾವುದೂ ಬರುತ್ತಿಲ್ಲ. ಅಂತೂ ಒಂದು ಒಟ್ಟಾರೆಯಲ್ಲಿ ಜನರ ಸಾಮಾಜಿಕ ಸ್ಥಿತಿಗತಿ ವೃದ್ಧಿ ಆಗುವ ಬದಲು ತೀವ್ರವಾಗಿ ಕುಗ್ಗ್ತಾ ಇದೆ. ಸಣ್ಣ ಆರೋಗ್ಯ ಸೇವೆಯೂ ಸಿಕ್ಕದೇ ಜನ ಬಳಲುತ್ತಿದ್ದಾರೆ. ಒಂದು ಕುಟುಂಬದಲ್ಲಿ ಅಜ್ಜಿಗೆ ಯಾವುದೋ ಚರ್ಮದ ಕಾಹಿಲೆ. ಮನೆಗೆ ಸೊಸೆಯಾಗಿ ಬಂದ 16 ವರ್ಷ ವಯಸ್ಸಿನ ಹುಡುಗಿಗೂ ಈ ಚರ್ಮ ರೋಗ ಹತ್ತಿದೆ. ಸುಲಭವಾಗಿ ವಾಸಿಯಾಗುವಂತಹ ಮಾಮೂಲಿ ಚರ್ಮದ ಕಾಯಿಲೆಯಿಂದ ಅಜ್ಜಿ-ಸೊಸೆ ಇಬ್ಬರೂ ಜೀವಮಾನವಿಡೀ ನರಳುವಂತಹ ಸ್ಥಿತಿ.

ಇದೇ ಹಳ್ಳಿಯ ಇನ್ನೊಂದು ಕುಟುಂಬದ ಸಮಸ್ಯೆಯೆಂದರೆ, ಅವರ ಮನೆ ಜಲಾಶಯ ಮಟ್ಟಕ್ಕೆ ಮೇಲುಗಡೆಗೆ ಬರುತ್ತದೆ. ಅಂದರೆ ಮುಳುಗಡೆಯಾಗುವುದಿಲ್ಲ. ಅವರ ನಾಲ್ಕೆಕರೆ ಜಮೀನು ಜಲಾಶಯದ ಕೆಳಗೆ ಬಂದು ಮುಳುಗಡೆಯಾಗುತ್ತದೆ. ಇವರು ಬಲು ಬೇಗ ಭೂರಹಿತರಾಗಿಬಿಡ್ತಾರೆ. ಇವರಿಗೆ ಪರಿಹಾರಾತ್ಮಕವಾಗಿ ಭೂಮಿ ಕೊಟ್ಟರೂ ಅದೆಲ್ಲೋ ದೂರ ಇರುತ್ತೆ. ಭಾಗಶಃ ಮುಳುಗಡೆಯಿಂದ ಇವರು ಎದುರಿಸುವ ಇಂತಹ ಸಮಸ್ಯೆ ಪೂರ್ಣ ಮುಳುಗಡೆಯಾಗಿ ಪರಿಪೂರ್ಣ ಸ್ಥಳಾಂತರಗೊಳ್ಳುವ ಸಮಸ್ಯೆಗಿಂತ ಕ್ಲಿಷ್ಟಕರವಾದದ್ದು.

ಇನ್ನೊಂದು ಕುಟುಂಬ. ಯಜಮಾನನಿಗೆ 105 ವರ್ಷ! ಪ್ಲೇಗ್‌ನ ವಿವರಗಳು, ಬಿದಿರು ಹೂಕೊಟ್ಟ ವಿವರಗಳನ್ನೆಲ್ಲಾ ಕೊಟ್ಟು ತನ್ನ ವಯಸ್ಸನ್ನು ಸಾಬೀತು ಪಡಿಸುತ್ತಾನೆ. ಈತನಿಗೆ ೫ ಜನ ಗಂಡು ಮಕ್ಕಳು, ಅವರಿಗೇ ಸಾಕಷ್ಟು ವಯಸ್ಸಾಗಿದೆ. ಇನ್ನೂ ಅವರ ಕುಟುಂಬಗಳೆಲ್ಲ ಸೇರಿ ವೃದ್ಧನ ಜಮೀನಿನ ಮೇಲೆಯೇ ನಿಂತಿವೆ. ವೃದ್ಧ ತಾನು ಬದುಕಿರೋವರೆಗೂ ಆಸ್ತಿ ಪಾಲು ಮಾಡುವುದಿಲ್ಲವೆಂದು ಹಟ ಹಿಡಿದಿದ್ದಾರೆ. ಆಸ್ತಿ ಪಾಲು ಮಾಡದಿರೋ ಕಾರಣ ಅವರೆಲ್ಲ ಭೂರಹಿತರೆಂದು ನೋಂದಾಯಿಸಲ್ಪಟ್ಟಿದ್ದಾರೆ. ಮುಳುಗಡೇಲಿ ವೃದ್ಧನ ಭೂಮಿ ಹೋಗ್ತಾ ಇದೆ. ಪರಿಹಾರ ವೃದ್ಧನೊಬ್ಬನಿಗೇ ಸಿಕ್ಕೋದ್ರಿಂದ ಎಲ್ಲ ಮಕ್ಕಳ ಕುಟುಂಬಗಳೂ ಬೀದಿಪಾಲಾಗುತ್ತಾರೆ.

ಈವರೆಗೆ ವಿವರಿಸಿದ ಹಳ್ಳಿಗಳೆಲ್ಲಾ ಕದ್ರ ಅಣೆಕಟ್ಟಿನಿಂದ ಮುಳುಗಡೆಯಾಗುವಂತವಾದರೆ ಇನ್ನು ಕೊಡಸಳ್ಳಿಯಿಂದ ಮುಳುಗಡೆಯಾಗುತ್ತಿರುವ ದೇವಕಾರ ಎಂಬ ಹಳ್ಳಿ ಇದೆ. ಈ ಹಳ್ಳಿಗೆ ಒಂದು ಕಡೆಯಿಂದ ಕದ್ರ ಜಲಾಶಯದ ನೀರು ಆವರಿಸಿಕೊಂಡರೆ ಮತ್ತೊಂದು ಕಡೆಯಿಂದ ಕೊಡಸಳ್ಳಿಯ ನೀರು. ಮೂರನೇ ಕಡೆ ಕೈಗಾ ಸ್ಥಾವರ. ನಾಲ್ಕನೇ ಕಡೆ ಗುಡ್ಡ. ಅಂದರೆ ಘಟ್ಟ ಶುರುವಾಗುತ್ತೆ. ಕೈಗಾ ಸ್ಥಾವರದಲ್ಲಿ ಸೆಕ್ಯುರಿಟಿ ಇರೋದ್ರಿಂದ ಆಕಡೆಯಿಂದ ಹೋಗಿ ಬರುವುದು ಮಾಡಲು ಸಾಧ್ಯವಿಲ್ಲ. ಘಟ್ಟ ಹತ್ತಿ ಇಳಿದೇ ಓಡಾಡಬೇಕು. ಕೊಡಸಳ್ಳಿಯ ಜಲಾಶಯದ ಮಟ್ಟವನ್ನು ಮಾರ್ಕ್ ಮಾಡಿ ಕಲ್ಲು ಹಾಕಿ ಹೋಗಿದಾರೆ, ಇಲ್ಲಿ ಒಂದು ಮನೆಯ ಕೊನೆಯ ಮೆಟ್ಟಿಲವರೆಗೆ ಮುಳುಗಡೆಯಾಗುತ್ತೆಂದು ಲೆಕ್ಕ ಹಾಕಿ ಪರಿಹಾರ ಕೊಟ್ಟು ಹೋಗಿದ್ದಾರೆ. ಮಾರ್ಚ್‌ನಲ್ಲೇ ಮಳೆಗಾಲದಲ್ಲಿ ಬರುವಷ್ಟು ನೀರು ಅಲ್ಲಿ ಬಂದುಬಿಟ್ಟಿದೆ. ಮಳೆಗಾಲದಲ್ಲಿ ಘಟ್ಟದಿಂದ ಝರಿಗಳೆಲ್ಲ ಹರಿದುಕೊಂಡು ಬಂದು ತನ್ನ ಮನೆಯೇ ಮುಳುಗಡೆ ಆಗುವ ಸ್ಥಿತಿಯನ್ನ ಕರ್ನಾಟಕ ಪವರ್ ಕಾರ್ಪೊರೇಷನ್‌ನವರಿಗೆ ಕುಟುಂಬದವರು ವಿವರಿಸಿದಾಗ ಘಟ್ಟದಿಂದ ಬರುವ ನೀರಿಗೆ ತಾವು ಜವಾಬ್ದಾರರಲ್ಲವೆಂದೂ, ಕೇವಲ ಜಲಾಶಯದಿಂದ ಬರುವ ನೀರಿಗಷ್ಟೇ ತಾವು ಜವಾಬ್ದಾರರೆಂದು ಹೇಳಿ ಹೋಗಿದ್ದಾರೆ. ಡಿ.ಸಿ.ಗೆ ಕಂಪ್ಲೇಟು ಮಾಡಿದರೆ, ಮಳೆಗಾಲದಲ್ಲಿ ಮನೆಗೆ ಓಡಾಡಲು ಮೆಕಾನಿಕಲ್ ದೋಣಿ ಕೊಡೋಣವೆಂಬ ಆಶ್ವಾಸನೆ ಕೊಟ್ಟಿದ್ದಾರೆ! ಇಂತಹ ವಿಚಿತ್ರ ಸನ್ನಿವೇಶ ಇದು. ಮಳೆಗಾಲದಲ್ಲಿ ಅವರ ಮನೆ ಉಳಿಯುತ್ತೋ ಇಲ್ಲವೋ ಅನ್ನುವುದು ಸ್ವಲ್ಪ ಅನುಮಾನ. ನಾಲ್ಕು ಜನ ಅಣ್ಣ ತಮ್ಮಂದಿರ ಒಟ್ಟು ಕುಟುಂಬಕ್ಕೆ ಅಳಿವು-ಉಳಿವಿನ ಪ್ರಶ್ನೆ ಇದು.

ಇಂತಹವುಗಳ ಜತೆಗೆಯೇ ಮುಳಗಡೆಗೊಂಡ ಪ್ರದೇಶದವರಿಗೆ ಸಿಗುವ ಪರಿಹಾರ ಸಾಮಾನ್ಯ ಜನರನ್ನು ಎಂತಹ ಸಲ್ಲದ ಕಾರ್ಯಾಚರಣೆಯಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸಿದೆ ಅನ್ನುವುದನ್ನು ಕಂಡಾಗ ಬಲು ಖೇದವಾಗುತ್ತದೆ. ಉದಾಹರಣೆಗೆ, ಇದೇ ಹಿಂದೆ ಹೇಳಿದ ದೇವಕಾರ ಅನ್ನುವ ಹಳ್ಳಿ, ಎತ್ತರದಲ್ಲಿರುವ ಹಳ್ಳಿ ಇದು. ನಾವು ಸಮೀಕ್ಷೆಗೆ ಹೋಗುವಾಗ ನಮ್ಮ ಮಾಹಿತಿಗೆಂದು ಆ ಊರಲ್ಲಿ ಎಷ್ಟು ಮನೆಗಳಿವೆಯೆಂದು ಕೇಳಿದರೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳತೊಡಗಿದರು. ಇದು ಎಷ್ಟು ಆಶ್ಚರ್ಯವಾಗಿತ್ತೆಂದರೆ, ನಮ್ಮ ಅನುಭವದಲ್ಲಿ ಒಂದು ಹಳ್ಳಿಯ ಬಗ್ಗೆ ಅಕ್ಕಪಕ್ಕದ ಹಳ್ಳಿಯ ಜನ ಇಷ್ಟೊಂದು ಗೊಂದಲದ ಮಾಹಿತಿ ಕೊಟ್ಟದ್ದೇ ಇಲ್ಲ. ಕೊನೆಗೆ ಗೊಂದಲದಲ್ಲೇ ದೋಣಿ ದಾಟಿ ಆ ಹಳ್ಳಿಗೆ ಹೋದಾಗ ಕಂಡದ್ದು, ಅಲ್ಲಿ ವಾಸವಾಗಿರುವುದು ಕೇವಲ 54 ಕುಟುಂಬಗಳು ಮಾತ್ರ. ಆದರೆ ಅಲ್ಲಿರೋ ಮನೆಗಳನ್ನ

ಲೆಕ್ಕ ಹಾಕಿದರೆ 150ಕ್ಕೂ ಹೆಚ್ಚು. ಹೊರಗಿನಿಂದ ಮಾತ್ರ ಪ್ಲಾಸ್ಟರ್ ಎಲ್ಲ ಹಾಕಿ, ಕಟ್ಟೆ ಕಟ್ಟಿ ಪಕ್ಕ ಮನೆಯಂತೆ ಕಾಣುವಂತೆ ಮಾಡಿದಾರೆ. ಮನೆ ಒಳಗೆ ಏನೂ ಇಲ್ಲ. ಕಾಡು ಹೇಗಿತ್ತೋ ಹಾಗೇ ಇದೆ. ತಲಹಾಟಿಗೆ ಲಂಚ ಕೊಟ್ಟು ಮುತ್ತಾತನ ಕಾಲದಿಂದ ಇದ್ದೇವೆಂದು ಸರ್ಟಿಫಿಕೇಟ್ ಮಾಡಿಸಿಕೊಂಡಿದ್ದಾರೆ. ಈ ಹಳ್ಳಿ ಮೂರೂ ಕಡೆಯಿಂದ ಜಲಾಶಯ ಮತ್ತು ಸ್ಥಾವರಗಳಿಂದ ಸುತ್ತುವರಿದಿರೋದ್ರಿಂದ ಈ ಹಳ್ಳಿ ಸ್ಥಳಾಂತರಗೊಂಡೇ ತೀರುತ್ತದೆಂದು ಅವರ ಅಂದಾಜು. ಅಲ್ಲಿಗೆ ತಾವು ಪ್ರತಿಯೊಂದಕ್ಕೂ ದೋಣಿ ದಾಟಬೇಕಾಗಿರುವುದರಿಂದ ಸ್ಥಳಾಂತರ ಮಾಡಿ ಎಂದು ಅಲ್ಲಿನ ಜನರೇ ಮನವಿ ಮಾಡಿಕೊಂಡಿದ್ದಾರೆ. ಆದರೆ ವಾಸ್ತವವೆಂದರೆ, ಈ ಹಳ್ಳಿ ಸ್ಥಳಾಂತರವಾಗುವುದಿಲ್ಲ. ಕದ್ರ, ಕೊಡಸಳ್ಳಿ ಅಣೆಕಟ್ಟುಗಳ ಜಲಾಶಯ ಮಟ್ಟಕ್ಕಿಂತ ಮೇಲಿರುವುದರಿಂದ ಅವರಿಗೆ KPCಯಿಂದ ಒಂದು ಪೈಸ ಪರಿಹಾರ ಸಿಗುವುದಿಲ್ಲ. ಅಣುಸ್ಥಾವರದಿಂದ 3.6 ಕಿ.ಮೀ. ದೂರದಲ್ಲಿರುವುದರಿಂದ ಇಲ್ಲೂ ಸ್ಥಳಾಂತರದ ವ್ಯಾಪ್ತಿಯಲ್ಲೂ ಬರುವುದಿಲ್ಲ. ಕೇವಲ 1.5 ಕಿ.ಮೀ. ಪರಿಧಿಯಲ್ಲಿರುವ ಹಳ್ಳಿಗಳನ್ನು ಮಾತ್ರ ಸ್ಥಳಾಂತರ ಮಾಡುತ್ತಾರೆ. ಇಂತಹ ವಿಚಿತ್ರ, ವಿಲಕ್ಷಣ ಸ್ಥಿತಿಯಲ್ಲಿ ಮೂರೂ ಕಡೆಯಿಂದ ನೀರು ಆವರಿಸಿಕೊಂಡು ಹಳ್ಳಿಯಲ್ಲಿ ಪರಿಹಾರವೆಂಬ ಮರೀಚಿಕೆಯ ಬೆನ್ನತ್ತಿ ಜನ ಹೊರಟಿದ್ದಾರೆ.

ಅತ್ಯಂತ ಕೊನೆಯದಾಗಿ ನಾನು, ಈ ಸ್ಥಳಾಂತರದ ಒತ್ತಡವನ್ನು ಅತ್ಯಂತ ಯಶಸ್ವಿಯಾಗಿ ಪ್ರತಿರೋಧಿಸಿ ನಿಂತ ಒಂದು ಕುಟುಂಬದ ಬಗ್ಗೆ ಹೇಳಲು ಇಷ್ಟಪಡುತ್ತೇನೆ. ವ್ಯವಸ್ಥೆಯನ್ನ ಎದುರಿಸಿ ನಿಲ್ಲುವ ನಮ್ಮ ಸಾಮರ್ಥ್ಯಕ್ಕೊಂದು ಅದ್ಭುತ ಉದಾಹರಣೆ ಇದು. ಅಣುಸ್ಥಾವರ ನಿರ್ಮಾಣಗೊಳ್ಳುತ್ತಿರುವ ಕೈಗಾ ಹಳ್ಳಿ ಒಳ್ಳೇ ಫಲವತ್ತಾದ ಸಪಾಟಾದ ಭೂಮಿಯ ಸುಂದರ ಹಳ್ಳಿ. ಅಣುಸ್ಥಾವರ ಬಂದಿರೋದ್ರಿಂದ ಆ ಹಳ್ಳಿಲಿರೋ ಎಲ್ಲ ಕುಟುಂಬಗಳನ್ನೂ ಪುನರ್ವಸತಿಗೊಳಿಸಲಾಯಿತು. ಇದ್ದ 83 ಕುಟುಂಬಗಳಲ್ಲಿ 82 ಕುಟುಂಬಗಳು ಪುನರ್ವಸತಿಗೊಂಡರೆ, ಸ್ಥಾವರ ಕಟ್ಟಲು ಪ್ರಾರಂಭವಾದ ಹನ್ನೊಂದು ವರ್ಷಗಳ ನಂತರವೂ 7 ಜನ ಗಂಡುಮಕ್ಕಳು, 3 ಜನ ಹೆಣ್ಣು ಮಕ್ಕಳ ಒಂದು ಒಟ್ಟು ಕುಟುಂಬ ಮಾತ್ರ ಇನ್ನು ಅಲ್ಲೇ ಇದ್ದು ತಮ್ಮ ಒಕ್ಕಲುತನ ಮಾಡಿಕೊಂಡು ಮಾಮೂಲಿಯ ಜೀವನ ನಡೆಸುತ್ತಿದ್ದಾರೆ. ಈ ಕುಟುಂಬಕ್ಕೆ 26 ಎಕರೆ ಜಮೀನಿದೆ. ಇವರ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳುವ ಪ್ರೊಸಿಡಿಂಗ್ಸ್ ನಡೆಯುತ್ತಿದ್ದಾಗಲೇ ಅಪ್ಪ ತೀರಿಕೊಂಡರು. ಅಪ್ಪ ಸತ್ತ ತಕ್ಷಣ ಏಳು ಜನ ಗಂಡುಮಕ್ಕಳೂ ತಾವೀಗ ವಿಭಾಗಗೊಂಡಿರುವದಾಗಿ ತೋರಿಸಿ ಪ್ರತಿ ಕುಟುಂಬಕ್ಕೂ ಪರಿಹಾರಕ್ಕೆ ಹಾಕಿಕೊಂಡರು. ಅಂದರೆ 7 ಮನೆ, 7 ಪ್ಲಾಟು, 7 ನೌಕರಿ ಮತ್ತು 26 ಎಕರೆ ಜಮೀನಿಗೆ ಪರಿಹಾರ! ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಇದನ್ನ ತಿರಸ್ಕರಿಸಿತು. ಇವರು ಚೀಫ್ ಜುಡಿಸಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿ NPCಯ ಅಧಿಕಾರಶಾಹಿಯ ಮೇಲೆ ತಡೆಯಾಜ್ಞೆ ತಂದರು. ಈಗ ಹನ್ನೊಂದು ವರ್ಷದಿಂದ NPCಯ ಮೇಲೆ ಪ್ರತಿಬಂಧಕಾಜ್ಞೆ ಇದೆ. ಅವರ್‍ಯಾರೂ ಇವರ ಗದ್ದೆ ಕಡೆ ಹೋಗುವಂತಿಲ್ಲ. ಇವರು ಮಾತ್ರ ತಮ್ಮ ಜಮೀನಲ್ಲಿ ಎಂದಿನಂತೆ ಓಡಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಸ್ಥಾವರದಲ್ಲಿ ಒಬ್ಬರಿಗೆ ನೌಕರಿಯನ್ನು ತೆಗೆದುಕೊಂಡಿದ್ದಾರೆ. ಹೀಗೆ ಎಲ್ಲ ತರದ ಹೋರಾಟ ಮಾಡಿ ಅವರಿನ್ನು ಅಲ್ಲೇ ಬದುಕಿದಾರೆ. ಈ ಅದ್ಭುತ ಪ್ರತಿರೋಧನೆಯ ಉದಾಹರಣೆಯನ್ನು ನೋಡುವಾಗ, ಪರಿಹಾರ ತೆಗೆದುಕೊಂಡು ಪರಾರಿಯಾದ 82 ಕುಟುಂಬಗಳಿಗೂ ಪಶ್ಚಾತ್ತಾಪ ಪಡುವಂತಾಗಿದೆ. ತಾವೂ ಹೀಗೆ ಪಟ್ಟು ಬಿಡದೆ ವಿರೋಧಿಸಿದ್ದರೆ ಸ್ಥಾವರವೇ ಬರದಂತೆ ನೋಡಿಕೊಳ್ಳಬಹುದಿತ್ತು ಎಂದು ಪರಿತಪಿಸುತ್ತಿದ್ದಾರೆ.

ನಾನೀಗ ವಿವರಿಸಿದ ಬಹುತೇಕ ಸಂಗತಿಗಳು ಭಾಗಷಃ ಮುಳುಗಡೆಗೆ ಸಂಬಂಧಿಸಿದಂತವೇ. ಸಂಪೂರ್ಣ ಮುಳುಗಡೆಗಿಂತ ಭಾಗಷಃ ಮುಳುಗಡೆಯ ಸಮಸ್ಯೆ ಅತ್ಯಂತ ಸಂಕೀರ್ಣವಾದದ್ದು ಎಂಬುದೇ ನನ್ನ ಅನುಭವ. ನಾವು ಸೈದ್ಧಾಂತಿಕವಾಗಿ ಚರ್ಚೆ ಮಾಡುವಾಗ; ಬರೆಯೋವಾಗ ನಮಗೆ ದಕ್ಕದೆ ಹೋಗುವಂತಹ ಈ ಒಳ ವಿವರಗಳು ನನ್ನನ್ನು ಆಳವಾಗಿ ತಟ್ಟಿವೆ. ಇದು ಸಾಮಾಜಿಕ ಬದುಕಿನ ಒಳಗಗಳನ್ನ ತಟ್ಟುವಂತದ್ದು, ಬದುಕಿನ ಅತ್ಯಂತ ವಯಕ್ತಿಕ ನೆಲೆಗಳನ್ನು ಘಾಸಿಗೊಳಿಸುವಂತದ್ದು.

ಜುಲೈನಲ್ಲಿ ಮಾನ್ಸೂನ್ ಶುರುವಾಗುವಾಗ ನಾವಲ್ಲಿಗೆ ಮತ್ತೆ ಹೋಗುವವರಿದ್ದೇವೆ. ಅಲ್ಲಿನ ಜನರಿಗೆ ಸರಿಯಾದ ರೀತಿಯಲ್ಲಿ ಪರಿಹಾರ ಸಿಗುವ ಹಾಗೆ ಕೇಸ್ ಹಾಕಬೇಕೆಂಬುದೂ ನಮ್ಮ ಯೋಜನೆಯಲ್ಲಿದೆ.

ಅಣುಸ್ಥಾವರ ವಿರೋಧೀ ಚಳವಳಿಯ ಸುತ್ತ : ಅಣುಸ್ಥಾವರ ಬಹುತೇಕ ನಿಶ್ಚಿತ ಎಂಬಂತಹ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಅಂದಿನ ಚರ್ಚೆ ಕೈಗಾ ಅಣುಸ್ಥಾವರ ವಿರೋಧೀ ಚಳುವಳಿಯ ಏಳು-ಬೀಳಿನ ಕಡೆಗೆ ತಿರುಗಿತು. ಅಷ್ಟೊಂದು ಪ್ರಭಲವಾಗಿ ರೂಪುಗೊಂಡ ಕೈಗಾ ಚಳುವಳಿ ಕುಂಠಿತಗೊಳ್ಳಲು ಕಾರಣವೇನು? ವಿಷ್ಣು ಕಾಮತ್ ಅವರ ಪ್ರಕಾರ, 91ರ ಚುನಾವಣೆಯ ಸಂದರ್ಭದಲ್ಲಿ ಶಿವರಾಮ ಕಾರಂತರನ್ನು ಮುಂದಿಟ್ಟುಕೊಂಡು ಚುನಾವಣೆಗೆ ಇದನ್ನು ಬಳಸಿಕೊಂಡದ್ದೇ ಚಳುವಳಿಗೆ ಬಿದ್ದ ಅತ್ಯಂತ ದೊಡ್ಡ ಪೆಟ್ಟು. ಮೊದಲನೆಯದಾಗಿ, ಶಿವರಾಮ ಕಾರಂತರಿಗೆ ಚುನಾವಣೆಗೆ ನಿಲ್ಲುವ ಯಾವ ಆಸಕ್ತಿಯೂ ಇರಲಿಲ್ಲ. ಎರಡನೆಯದಾಗಿ, ಪ್ರಚಾರ ಕಾಲದಲ್ಲಿ ಅವರು ಹೊರ ದೇಶದಲ್ಲಿದ್ದರು. ಹೀಗಾಗಿ ಜನರಿಗೆ ಅಭ್ಯರ್ಥಿಯ ಬಗ್ಗೆಯೇ ವಿಚಿತ್ರ ಮನೋಭಾವ ಬೆಳೆಯುವಂತಾಯಿತು. ಮೂರನೆಯದಾಗಿ ಇವರು ಬಳಸಿಕೊಂಡ ಚುನಾವಣಾ ಪ್ರಚಾರದ ವಿಧಾನಗಳು ಬೇರೆ ದೊಡ್ಡ ಪಾರ್ಟಿಗಳ ವಿಧಾನದಲ್ಲಿಯೇ ಇತ್ತೇ ಹೊರತು ಜನಪರ ಚಳವಳಿಯ ಹೊಳಹುಗಳನ್ನು ಪ್ರಕಟಪಡಿಸಲಿಲ್ಲ. ಕೊನೆಯದಾಗಿ

ಶಿವರಾಮ ಕಾರಂತರು ದಯನೀಯವಾಗಿ ಸೋಲಪ್ಪಿದಾಗ ಇಡೀ ಚಳವಳಿಗೆ ಇದ್ದ ಜಂಗಾಬಲವೆಲ್ಲ ಉಡುಗಿ ಹೋದಂತಾಯಿತು.

ಪೇಜಾವರ ಮಠದ ಸ್ವಾಮಿಗಳ ವಿಚಾರದಲ್ಲಿ ಆದದ್ದೂ ಹೀಗೆ. ಸ್ವಾಮಿಗಳನ್ನು ಮುಂದಿಟ್ಟುಕೊಂಡು ಹೋದಾಗ, ಅವರ ಹೆಸರಿನ ಆಧಾರದ ಮೇಲೆ ಜನ ಬೆಂಬಲ ಸಿಗುತ್ತಿತ್ತು. ಸ್ವಾಮಿಗಳು ಬೆಂಬಲ ಹಿಂತೆಗೆದುಕೊಂಡಾಗ ಜನ ಬೆಂಬಲವೂ ಕ್ಷೀಣಗೊಂಡಿತು. ಹೀಗೆ ದೊಡ್ಡ ಹೆಸರುಗಳನ್ನು ಮುಂದಿಟ್ಟುಕೊಂಡು ಚಳವಳಿಯಲ್ಲಿ ಉದ್ಯುಕ್ತಗೊಂಡದ್ದು ವಿಷ್ಣು ಅವರ ಪ್ರಕಾರ ಚಳವಳಿಯ ಒಂದು ದೊಡ್ಡ ದೌರ್ಬಲ್ಯ. ಇದರ ಜತೆಗೇ ಚಳವಳಿಯ ಭಿನ್ನ ಭಿನ್ನ ನಾಯಕತ್ವಗಳು. ಬೇರೆ ಬೇರೆ ಸಿದ್ಧಾಂತಗಳಿಗೆ ಪಕ್ಕಾಗಿರುವ ಇಂತಹ ನಾಯಕತ್ವಗಳಿಂದಾಗಿ ಚಳುವಳಿಯು ಅನೇಕ ದಿಕ್ಕುಗಳತ್ತ ನೋಡುವಂತಾಗಿದೆ. ಅಣುಸ್ಥಾವರ ವಿರೋಧಿಯ ನಿಲುವೊಂದಾದರೆ, ಜನರಿಗೆ ಸರಿಯಾದ ಪರಿಹಾರ ದೊರಕ ಬೇಕೆನ್ನುವ ನಿಲುವು ಮತ್ತೊಂದು. ಇನ್ನೊಂದು ವಿಚಿತ್ರವೆಂದರೆ, ಕರ್ನಾಟಕದ ಪರಿಸರ ಚಳುವಳಿಯಲ್ಲಿ ಅತ್ಯಂತ ಮಹತ್ವದ ಮತ್ತೊಂದು ನಾಯಕತ್ವ ನೇರವಾಗಿ ಅಣುಸ್ಥಾವರವನ್ನು ವಿರೋಧಿಸದೆ, ಅಣುಸ್ಥಾವರದಿಂದ ಎಲೆಕ್ಟ್ರಿಕ್ ಲೈನುಗಳನ್ನು ಎಳೆಯುವುದರಿಂದ ಉಂಟಾಗುವ ಅರಣ್ಯ ನಾಶವನ್ನು ವಿರೋಧಿಸುತ್ತಿದೆ! ಇವೆರಡೂ ಭಿನ್ನ ಸಮಸ್ಯೆಗಳು ಹೇಗಾಗುತ್ತವೋ ಕಾಣೆ!

ಇವೆಲ್ಲದರ ನಡುವೆಯೂ ತಮ್ಮ ಗುಂಪು 'ಅವಿನಾಶ' ನಡೆಸುತ್ತಿರುವ ಆರೋಗ್ಯ ಸಮೀಕ್ಷೆಯ ಜತೆ ಜತೆಗೇ ಮತ್ತೊಂದು ಅಣುಸ್ಥಾವರ ವಿರೋಧೀ ಚಳುವಳಿ ರೂಪಿಸಲು ಸಾಧ್ಯವಿರುವಂತಹ ಅತ್ಯಂತ ದೂರದೃಷ್ಟಿಯ ಮಹತ್ವಾಕಾಂಕ್ಷೆ ವಿಷ್ಣು ಕಾಮತರದು. ಆರೋಗ್ಯ ಸಮೀಕ್ಷೆಯ ನೆಪದಲ್ಲಿ ಸುತ್ತಮುತ್ತಲ ಎಲ್ಲ ಹಳ್ಳಿಯ ಜನರ ಜತೆ ಅತ್ಯಂತ ನಿಕಟ ಸಂಪರ್ಕ ಸಾಧ್ಯವಾಗುವುದೂ ಅಲ್ಲದೆ, ಸುಮಾರು 25 ಪುಟಗಳ ಪ್ರಶ್ನಾವಳಿಯನ್ನು ಉತ್ತರಿಸಿ ಮುಗಿಸುವ ವೇಳೆಗೆ, ಜನರಿಗೆ ಮುಂದೆ ತಮಗೆಂತದೋ ಗಂಭೀರವಾದ ಕೇಡು ನಿಶ್ಚಿತ ಎಂಬುದು ಮನದಟ್ಟಾಗುತ್ತಿದೆ. ಇಲ್ಲಿಂದಲೇ ಮತ್ತೊಂದು ಪ್ರಭಲ ಚಳವಳಿ ರೂಪುಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಮಹಿಳಾ ಪ್ರಶ್ನೆಯ ಸುತ್ತ : ತಮ್ಮ ಮಾತಿನ ಉದ್ದಕ್ಕೂ ವಿಷ್ಣು ಕಾಮತರವರು ತಾವು ಸ್ಥಳಾಂತರದ ಸಮಸ್ಯೆಯನ್ನು ಮಹಿಳಾ ದೃಷ್ಟಿಕೋನದಿಂದ ನೋಡಿಲ್ಲವೆಂದು ಹೇಳುತ್ತಲೇ ಇದ್ದರಾದರೂ ಅವರು ನಮ್ಮ ಗಮನಕ್ಕೆ ತಂದ ಸಂಗತಿಗಳ ಒಡಲಲ್ಲೇ, ಅದರಲ್ಲಿ ಒಳಪಟ್ಟಿರುವ ಮಹಿಳೆಯರ ವಿಶೇಷವಾದ ಸಮಸ್ಯೆಗಳು ಅಡಗಿರುವುದನ್ನು ಸ್ಪಷ್ಟವಾಗೇ ಗುರುತಿಸಬಹುದಾಗಿತ್ತು.

* ಮುಕ್ತವಾದ ಚಲನವಲನ ಸಾಧ್ಯವಿರುವ ಕುಟುಂಬದ ಗಂಡಸರಂತಲ್ಲದ ಹೆಂಗಸರ ಕುಟುಂಬ ಮತ್ತು ಸಮುದಾಯಗಳ ಜತೆಗೆ ಅತ್ಯಂತ ನಿಕಟ ಸಂಬಂದ ಹೊಂದಿದ್ದು ಅವರ ಬದುಕುಗಳು ಸಂಪೂರ್ಣವಾಗಿ ಇವುಗಳ ಮೇಲೆ ಆತುಕೊಂಡಿರುವುದರಿಂದ, ಸ್ಥಳಾಂತರಗೊಳ್ಳುವಾಗ, ಕುಟುಂಬ, ಸಮುದಾಯಗಳು ಛಿದ್ರಗೊಳ್ಳುವುದು ಮಹಿಳೆಯರ ಮೇಲೆ ಅತ್ಯಂತ ತೀವ್ರ ಪರಿಣಾಮ ಬೀರುತ್ತದೆ. ಅಗೋಚರ ಸಾಮಾಜೀಕರಣ (informal Socialisation) ಮಹಿಳೆಯರ ಬದುಕಿನ ಜೀವಾಳವಾಗಿರುವಾಗ ಅದರ ನಾಶ ತುಂಬಾ ವಿಧ್ವಂಸಕಾರೀ.

* ಸ್ಥಳಾಂತರಗೊಂಡವರಿಗೆ ಪರಿಹಾರ ನೀಡುವುದು ಆಸ್ತಿಯ ಒಡೆತನ ಹೊಂದಿದವರ ಹೆಸರಿಗೆ ಅದು ಹೋಗುವುದರಿಂದ ಹೆಂಗಸರು ಇಲ್ಲಿ ನೇರವಾಗಿ ಭೂರಹಿತರು - ನಿರ್ಗತಿಕರು ಆಗುತ್ತಾರೆ. 1894ರ ಭೂ ಸ್ವಾಧೀನ ಕಾಯಿದೆ ಸ್ಪಷ್ಟವಾಗಿ ಹೆಂಗಸರನ್ನು ಭೂ ಒಡೆಯ ಗಂಡಸಿನ ಮೇಲೆ ಅವಲಂಬಿಸಿರುವವಳೆಂದೇ ಹೇಳು ಪುದರಿಂದ ಹೆಂಗಸರ ಹೆಸರಿಗೆ ಪರಿಹಾರ ಸಿಗುವುದು ಕಾಯಿದೆ ಬಾಹಿರ ಕೂಡ.

* ಹಾಗೆಯೇ ನೌಕರಿಯ ವಿಚಾರ ಕೂಡ. ಕುಟುಂಬ ಕ್ಕೊಂದು ನೌಕರಿಯ ಪ್ರಶ್ನೆ ಬಂದಾಗ ಈ ನೌಕರಿ ಪಡೆಯುವ ಸಾಮರ್ಥ್ಯ ಮತ್ತು ಅದರ ಅವಶ್ಯಕತೆಯಿರುವುದು ಕುಟುಂಬದ ಗಂಡಸಿಗೇ (ಮಕ್ಕಳಾದರೆ ಗಂಡು ಮಗನಿಗೆ) ಎಂಬುದು ಅಭಿಪ್ರಾಯವಾದ್ದರಿಂದ "ಕುಟುಂಬಕ್ಕೊಂದು ನೌಕರಿ"ಯಡಿ ಹೆಂಗಸರು ಸೇರುವುದಿಲ್ಲ. ಇದು ಸ್ಪಷ್ಟವಾಗಿ ಅವರ ನಿರುದ್ಯೋಗಕ್ಕೆ ಕಾರಣವಾಗುತ್ತದೆ.

* ಮಹಿಳೆಯರ ಭೂಮಿಯೊಂದಿಗಿನ ಸಂಬಂಧ ಅವರನ್ನು ಉತ್ಪಾದನಾ ಪ್ರಕ್ರಿಯೆಯ, ನಿರಂತರ ಜೀವಧಾರಿತ ಪ್ರಕ್ರಿಯೆಯ ಹಾಸುಹೊಕ್ಕಾಗಿರಿಸಿರುತ್ತದೆ. ಭೂಮಿ ಕಳಕೊಂಡು, ಗಂಡನಿಗೆ ನೌಕರಿಯಿಂದ ಸಿಕ್ಕಿದ ಕಾಂಕ್ರೀಟಿನ ಬಹು ಮಹಡಿ ಕಟ್ಟಡಗಳಲ್ಲಿ ತೂರಿಕೊಂಡು ಬದುಕುವಾಗ ಬದುಕಿನ ಇಂತಹ ಜೀವಂತ ಎಳೆಗಳು ನಾಶವಾಗುತ್ತವೆ. ಉತ್ಪಾದನಾ ಸ್ವರೂಪೀ ಕ್ರಿಯಾಶೀಲ ಬದುಕಿನಿಂದ ದಮನಕಾರಕ ಮನೆ ಮಡದಿ ಪಾತ್ರಕ್ಕೆ ಸ್ಥಿತ್ಯಂತರಗೊಳ್ಳುತ್ತದೆ.

* ಅರೆ ಮುಳುಗಡೆಯ ಹಿಂದಿನ ಎಲ್ಲ ಉದಾಹರಣೆಗಳ ಸಂದರ್ಭದಲ್ಲೂ ಸುತ್ತುಮುತ್ತು ನೀರು ಆವರಿಸಿಕೊಂಡು ಬಹುಪಾಲು ದ್ವೀಪಗಳಂತ ಸ್ಥಿತಿಯಲ್ಲಿ ಬದುಕುವಾಗ ಜನರ ಚಲನವಲನದ ಮೇಲೆ ತುಂಬಾ ನಿಬಂಧನೆಗಳುಂಟಾಗುತ್ತವೆ. ಇದರಿಂದ ಅತ್ಯಂತ ಬಾಧಿಸಲ್ಪಡುವವರು ಮಹಿಳೆಯರು. ತಮ್ಮ ಯಾವತ್ತೂ ಸೀಮಿತ ಚಲನವಲನಗಳಿಂದಲೇ ಉತ್ಪಾದನ ಪ್ರಕ್ರಿಯೆಯ ಕ್ರಿಯಾಶೀಲ ಭಾಗವಾಗಿದ್ದ ಮಹಿಳೆಯರು ಇಲ್ಲಿ ತಮ್ಮ ಸಂಪೂರ್ಣ ಚಲನವಲನಗಳನ್ನು ಕಳೆದುಕೊಂಡು ಇಡಿಯಾಗಿ ಉತ್ಪಾದನಾ ಪ್ರಕ್ರಿಯೆಯಿಂದ ಹೊರದೂಡಲ್ಪಡುತ್ತಾರೆ.

●

'ಮಾನಸ'ಕ್ಕಾಗಿ ಧನ ಸಹಾಯ ಮಾಡಿ ಎಂದು ಜನವರಿಯಲ್ಲಿ ಓದುಗರಲ್ಲೊಂದು ಮನವಿಯನ್ನು ಮಾಡಿಕೊಂಡಿದ್ದೆವು. ನಮ್ಮ ಮನವಿಗೆ ಸ್ಪಂದಿಸಿ ಅನೇಕ ಓದುಗರು ತಿಂಗಳಿಗೆ ಇಂತಿಷ್ಟು, ವರ್ಷಕ್ಕೆ ಇಂತಿಷ್ಟು ಎಂದು ಹಣ ಕಳುಹಿಸುತ್ತಿದ್ದಾರೆ. ನಮ್ಮ ಪ್ರಯತ್ನಕ್ಕೆ ಸಹಾಯ ಹಸ್ತ ನೀಡಿದವರನ್ನು ನೆನೆವುದು ಮುಖ್ಯವೆನಿಸಿ ಅವರುಗಳ ಹೆಸರುಗಳನ್ನು ಪ್ರಕಟಿಸುತ್ತಿದ್ದೇವೆ. ಜನವರಿಯಿಂದ ಜೂನ್ ತಿಂಗಳವರೆಗೆ ನೀಡಿದವರ ಹೆಸರುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಮುಂದೆ ಪ್ರತಿ ತಿಂಗಳೂ ಆಯಾ ತಿಂಗಳು ಸಹಾಯಧನ ನೀಡಿದವರ ಹೆಸರನ್ನು ಪ್ರಕಟಿಸಲಾಗುವುದು.

ವರ್ಷಕ್ಕೊಮ್ಮೆ ಧನ ಸಹಾಯ ನೀಡುವವರು

ಜನವರಿ	:	ಶ್ರೀ ದಿನೇಶ್	100-00
		ಶ್ರೀಮತಿ ಹೆಚ್. ಎಂ. ಹೇಮಲತ	200.00
		ಶ್ರೀಮತಿ ವಿನೋದ	200.00
ಫೆಬ್ರವರಿ	:	ಶ್ರೀಮತಿ ವಾಣಿ	100.00
ಮಾರ್ಚ್	:	ಶ್ರೀಮತಿ ಶಾಂತಮ್ಮ	100.00
		ಶ್ರೀ ಮಕಾಳಿ	100.00
ಏಪ್ರಿಲ್	:	ಶ್ರೀ ಎಲ್. ಸಿ. ನಾಗರಾಜ್	100.00
		ಶ್ರೀ ಈರೇಶ್ ನಗರ್ಲೆ	100.00
		ಶ್ರೀಮತಿ ಬಿ. ಎಸ್. ವೆಂಕಟಲಕ್ಷ್ಮಿ	100.00
		ಶ್ರೀಮತಿ ಸಿ. ಜಿ. ಮಂಜುಳ	200.00
ಮೇ	:	ಡಾ. ಆರ್. ಇಂದಿರಾ	100.00
		ಶ್ರೀಮತಿ ಪ್ರೀತಿ ಶುಭಚಂದ್ರ	100.00
		ಶ್ರೀಮತಿ ಕೆ. ಸುಶೀಲ	100.00
		ಶ್ರೀಮತಿ ಶೈಲಜಾ ಕೆ.	100.00
		ಶ್ರೀಮತಿ ಉಷಾ	100.00
		ಶ್ರೀಮತಿ ಆಶಾ ಕಚ್ರು	300.00
		ಶ್ರೀಮತಿ ದೇವಯಾನಿ	500.00
ಜೂನ್	:	ಶ್ರೀ ಗೋಪಿನಾಥ್	500.00
		ಶ್ರೀ ಪಿಚ್ಚಳ್ಳಿ ಶ್ರೀನಿವಾಸ	250.00
		ಶ್ರೀಮತಿ ದೀಪ ಧನರಾಜ್	400.00

ಪ್ರತಿ ತಿಂಗಳು ನೀಡುವವರು

ಶ್ರೀಮತಿ ರಮಾ	50-00
ಶ್ರೀಮತಿ ಪುಷ್ಪ	100-00
ಶ್ರೀಮತಿ ಅರುಂಧತಿ	10-00
ಶ್ರೀಮತಿ ನಳಿನಿ	25-00
ಶ್ರೀಮತಿ ರುಕ್ಮಿಣಿ	25-00
ಡಾ. ಸುಧಾ ಹೆಚ್. ಎಂ.	25-00
ಶ್ರೀಮತಿ ಪ್ರಭಾಕುಮಾರಿ	25-00

ಓದುಗರಿಗೊಂದು ಮನವಿ

ಕಳೆದ ಹತ್ತು ವರ್ಷಗಳಿಂದ ಮಾನಸ ತಿಂಗಳ ಪತ್ರಿಕೆಯನ್ನು ಓದುಗರ ಹಾಗೂ ಸಹೃದಯರ ಸಹಕಾರದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ಸಂಸ್ಥೆಯ ಹಾಗೂ ಸರ್ಕಾರದ ನೆರವಿಲ್ಲದೆ, ಸ್ವಾಯತ್ತವಾಗಿ ಮಹಿಳೆಯರೇ ಮಾನಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದೇವೆ.

ಕರ್ನಾಟಕದ ಮಹಿಳಾ ಚಳುವಳಿಯಲ್ಲಿ ಮಾನಸದಂತಹ ಪತ್ರಿಕೆಯ ಪಾತ್ರ ಮಹತ್ತರವಾದುದೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆಗೆ ಕಳೆದ ಹತ್ತು ವರ್ಷಗಳಿಂದ ನೀರೆರೆದು ಪೋಷಿಸಿದವರು ನೀವು. ಆದರೆ ಮಾನಸ ಪ್ರಕಟಣೆಯ ಹಾದಿ ಸುಗಮವಾದುದೇನಲ್ಲ. ಪ್ರತಿ ವರ್ಷವೂ, ಗೊಂದಲ, ಹತಾಷೆ, ಅಧೈರ್ಯದ ಸ್ಥಿತಿಯಲ್ಲಿಯೇ ಮಾನಸವನ್ನು ಪ್ರಕಟಿಸುತ್ತಾ ಬಂದಿದ್ದೇವೆ.

ಮಾನಸದಂತಹ ಪ್ರಕಟಣೆಯಲ್ಲಿ ಎದುರಾಗುವ ದೊಡ್ಡ ಸಮಸ್ಯೆ ಹಣಕಾಸಿನದು. ಮಾನಸಕ್ಕೆ ಯಾವುದೇ ಸ್ಥಾಯಿ ನಿಧಿ ಇಲ್ಲ. ಖಾಯಂ ಆದ ಸಾಂಸ್ಥಿಕ ರಚನೆಯ ಬಗ್ಗೆ ಹಾಗೂ ಖಾಯಂ ಆದ ಸ್ಥಾಯಿ ನಿಧಿಯ ಬಗ್ಗೆ ನಮಗೆ ಹಲವಾರು ಪ್ರಶ್ನೆಗಳಿರುವುದರಿಂದ ಆ ಬಗ್ಗೆ ಹೆಚ್ಚಿನ ಗಮನವನ್ನು ನೀಡಲಾಗಿಲ್ಲ. ಮಾನಸದ ಒಂದು ಸಂಚಿಕೆಗೆ ಸುಮಾರು 3,000ರೂ.ಗಳಾಗುತ್ತದೆ. ಪ್ರತಿ ಸಂಚಿಕೆಗೂ ಚಂದಾ ಹಾಗೂ ಕೊಡುಗೆ ಹಣದಿಂದ ಪತ್ರಿಕೆಯನ್ನು ಪ್ರಕಟಿಸಲಾಗುವುದು. ಕಾಳಜಿಯುಳ್ಳ ಸಹೃದಯರು ಹಾಗೂ ಗೆಳತಿಯರು ಪ್ರತಿ ತಿಂಗಳೂ ಶಕ್ತ್ಯಾನುಸಾರ ಆರ್ಥಿಕ ನೆರವು ನೀಡುತ್ತಿದ್ದಾರೆ. ಆದರೆ ಪ್ರತಿ ಸಂಚಿಕೆಗೂ ಹಣ ಸಂಗ್ರಹಿಸಿ, ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾದುದರಿಂದ ಒಂದು ವರ್ಷದ ಸಂಚಿಕೆಗಳ ಪ್ರಕಟಣೆಗೆ ನೆರವಾಗುವಂತೆ ಹಣವನ್ನು ಸಂಗ್ರಹಿಸುವ ಉದ್ದೇಶದಿಂದ ನಮ್ಮ ಈ ಆಲೋಚನೆಯನ್ನು ತಮ್ಮ ಮುಂದಿಡುತ್ತಿದ್ದೇವೆ.

ವರ್ಷಕ್ಕೊಮ್ಮೆ (ಪ್ರತಿ ವರ್ಷವೂ) ಪತ್ರಿಕೆಗೆ 200-00 ರೂ. ಅಥವಾ 100/- ರೂ.ಗಳನ್ನು ಕೊಡುಗೆಯಾಗಿ ನೀಡಬೇಕೆಂದು ತಮ್ಮನ್ನು ಕೋರುತ್ತೇವೆ. 25/- ರೂ. ಅಥವಾ 50/- ರೂ.ಗಳನ್ನು ನೀಡಬಯಸುವವರು ಪ್ರತಿ ತಿಂಗಳೂ ಕಳಿಸಿ ಕೊಡಬಹುದು. ಇದುವರೆಗೆ ಮಾನಸ ಪತ್ರಿಕೆಯ ಪ್ರಕಟಣೆಗೆ ನೀರೆರೆದ ಸಹೃದಯರು ಮಾನಸವನ್ನು ಉಳಿಸಿ ಬೆಳೆಸುವಲ್ಲಿ ನೆರವಾಗಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ. ನೀವು ನೀಡುವ ಈ ಕೊಡುಗೆ ಪತ್ರಿಕೆಯ ಪ್ರಕಟಣೆಗೆ ನೆರವಾಗುವುದಲ್ಲದೆ, ಮಾನಸದ ಇತರ ಚಟುವಟಿಕೆಗಳಿಗೂ ನೆರವಾಗುತ್ತದೆ.

ಹಣವನ್ನು "ಮಾನಸ ತಿಂಗಳ ಪತ್ರಿಕೆ" ಹೆಸರಿನಲ್ಲಿ ಎಂ.ಓ. ಅಥವಾ ಡಿ.ಡಿ. ಮೂಲಕ ಕಳಿಸಿ ಕೊಡಬಹುದು. ಮಾನಸ ಬೆಳೆಯಬೇಕಾಗಿರುವುದು ಮುಖ್ಯವಾಗಿ ಓದುಗರಿಂದ, ಆದ್ದರಿಂದ ತಪ್ಪದೆ, ತಮ್ಮ ಸ್ನೇಹಿತರನ್ನು ಪರಿಚಿತರನ್ನು ಚಂದಾದಾರರನ್ನಾಗಿಸಿ.

- ಸಂಪಾದಕ ಮಂಡಳಿ

ಚಡಪಡಿಕೆ

ಎಂಥದೊ ನಿಶ್ಶಕ್ತಿ
ತಿಕಬೆಂದ ಹಕ್ಕಿಯಂತ ಚಡಪಡಿಕೆ
ತಂಪಾಗಿ ಮೈಚಾಚಲೋದರೆ
ಧಗಧಗಿಸುವ ಉರಿ
ಬಗೆ ಬಗೆಯ ಕನಸಾಗಲೆಂದು
ನಿದ್ದೆ ಹೋದರೆ
ಜಾಡಿಸಿ ಒದ್ದಂತೆ
ಮುಳುಗಿ, ಉಸಿರುಗಟ್ಟಿದಂತೆ

ಇದೆಂಥಾ ಯಾತನೇ
ಬಿಡಿಸಲಾರೆ
ಇದ್ದು ನುಡಿಸಲಾರೆ

ಸದ್ದಿಲ್ಲದ ಹೆಜ್ಜೆ ಜಾಲಹರಡಿ
ಹೊಂಚುಹಾಕಿ
ಲಬಕ್ಕನೆ ನುಂಗಿ
ಮೀಸಿ ತೀಡಿದೆ

- ಸ. ದು.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ.

ಸಂ. ಮಂಡಳಿ

REGD NO. KRNA 271

BOOK-POST
PRINTED MATTER

ವಿಳಾಸ : .
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067